ಬಾಡಿಗೆ ನಿಯಂತ್ರಣ ಆಕ್ಟ್ ತಂದ ಮೇಲೆ ಮದ್ಯಮ ಮತ್ತು ಬಡ ವರ್ಗದ ಜನರಿಗೆ ಇದರ ಲಾಭ ಯಾವ ರೀತಿಯಲ್ಲಿ ಸಿಕ್ಕುತ್ತದೆ ಎನ್ನುವ ಬಗ್ಗೆ ತಮ್ಮ ಮೂಲಕ ಸನಾಮಾನ್ಯ ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ: ಮಾನ್ಯ ಅಧ್ಯಕ್ಷರೆ, ಈಗ ಇರತಕ್ಕಂಥ ಕಾನೂನಿನಲ್ಲಿ ಬಡವರಿಗೆ ತೊಂದರೆಯಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಈ ರೆಂಟ್ ಕಂಟ್ರೋಲ್ ಆಕ್ಟ್‌ನ್ನು ಸ್ಥಗಿತಗೊಳಿಸಲಾಗಿದೆ. ಕೇಂದ್ರ ಸರ್ಕಾರದವರು ಕೂಡ ನಮ್ಮ ಸರ್ಕಾರಕ್ಕೆ ಕಾಗದವನ್ನು ಬರೆದು ಡೆಲ್ಲಿಯ ರೆಂಟ್ ಕಂಟ್ರೋಲ್‌ನ್ನು ಅಳವಡಿಸಿ, ರೆಂಟ್ ಕಂಟ್ರೋಲ್ ಆಕ್ಟ್‌ನ್ನು ಮಾಡಬೇಕೆಂದು ಹೇಳಿ ಸೂಚನೆಯನ್ನು ನೀಡಿದ್ದಾರೆ. ಸಾಧ್ಯವಾದ ಮಟ್ಟಿಗೆ ಮುಂದಿನ ವಿಧಾನಸಭೆಯಲ್ಲಿ ಒಂದು ಸಮಗ್ರವಾಗಿರತಕ್ಕಂಥ ಬದಲಾವಣೆ ತಂದು ಅಮೆಂಡ್‌ಮೆಂಟ್ ತಂದು ಈ ರೆಂಟ್ ಕಂಟ್ರೋಲ್ ಆಕ್ಟ್‌ನ್ನು ಜಾರಿಗೆ ತರುವುದಕ್ಕೆ ಕ್ರಮವನ್ನು ಹಮ್ಮಿಕೊಂಡಿದ್ದೇವೆ. ಹಿಂದೆ ಇರತಕ್ಕಂಥ ಕಾನೂನಿನಲ್ಲಿ ಬಹಳ ತೊಡಕುಗಳಿವೆ. ಇದರಿಂದ ಬಡವರಿಗೆ ತೊಂದರೆಯಾಗುತ್ತದೆ.

ಶ್ರೀ ಶಿವಾನಂದ ಎನ್. ಪಾಟೀಲ: ಮಾನ್ಯ ಅಧ್ಯಕ್ಷರೆ, ಮೊದಲ ಪ್ರಶ್ನೆಗೆ ಉತ್ತರವಾಗಿ ಕೆಲವು ನಗರಪ್ರದೇಶಗಳಲ್ಲಿ ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಅವು ರಾಜ್ಯದಲ್ಲಿರತಕ್ಕಂಥ ಯಾವ ಯಾವ ನಗರಗಳು?

ಶ್ರೀ ರಮೇಶ್ ಸ. ಜಿಗಜಿಣಗಿ: ಮಾನ್ಯ ಅಧ್ಯಕ್ಷರೆ, ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ರಾಜ್ಯದಲ್ಲಿ ತೋಟಗಾರಿಕಾ ಫಾರಂಗಳು

115 (962) ಶ್ರೀ ಬಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಫಾರಂಗಳಿವೆ? (ಜಿಲ್ಲಾವಾರು) (ಅವುಗಳ ವಿಸ್ತೀರ್ಣವೇನು)?

ಆ) ಈ ಫಾರಂಗಳ ನಿರ್ವಹಣೆಗೆ ಪ್ರತಿ ವರ್ಷ ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ? (ಫಾರಂ ವಾರು)?

ಇ) ಈ ಫಾರಂ ಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು? ಫಾರಂ ವಾರು)

ಈ) ನಷ್ಟ ಅನುಭವಿಸಿದ್ದರೆ ಕಾರಣಗಳೇನು

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟಾರೆ 397 ತೋಟಗಾರಿಕೆ ಕ್ಷೇತ್ರ: ಸಸ್ಯಗಾರಗಳಿವೆ (ಜಿಲ್ಲಾವಾರು ಮಾಹಿತಿ ಹಾಗೂ ವಿಸ್ತೀರ್ಣವನ್ನು ಅನುಬಂಧ-1 ರಲ್ಲಿ ವಿವರಿಸಲಾಗಿದೆ.

ಅ) 1995-96ನೇ ಸಾಲಿನಲ್ಲಿ ಈ ಫಾರಂ ಗಳ ನಿರ್ವಹಣೆಗೆ ಇಲಾಖೆಯಿಂದ ರೂ. 766-00 ಲಕ್ಷಗಳನ್ನು ವ್ಯಯಿಸಲಾಗಿದೆ. ಫಾರಂ ವಾರು ಖರ್ಚು ಮಾಡಿರುವ ವಿವರಗಳನ್ನು ಅನುಬಂಧ-1 ರಲ್ಲಿ ವಿವರಿಸಿದೆ.

ಇ) ಈ ಫಾರಂ ಗಳಿಂದ 1995-96ನೇ ಸಾಲಿನಲ್ಲಿ ರೂ.403-778ಲಕ್ಷ ಆದಾಯ ಬಂದಿದೆ. ಸರ್ಕಾರಕ್ಕೆ ಇಲಾಖೆಯ ಫಾರಂಗಳಿಂದ ಬಂದ ಫಾರಂವಾರು ಆಧಾಯದ ವಿವರಗಳನ್ನು ಅನುಬಂಧ-1ರಲ್ಲಿ ನಮೂದಿಸಲಾಗಿದೆ.

ಈ) ನಷ್ಟ ಅನುಭವಿಸಲು ಇರುವ ಮುಖ್ಯ ಕಾರಣಗಳಾವುವೆಂದರೆ.

1) ತಾಂತ್ರಿಕ ಅಧಿಕಾರಿಗಳ ಕೊರತೆ

2) ಕ್ಷೇತ್ರ ನಿರ್ವಹಣೆಗೆ ಸಾಕಾಗುವಷ್ಟು ಅನುಧಾನ ದೊರೆಯದೇ ಇರುವುದು.

3) ನೀರಿನ ಕೊರತೆ.

4) ಉತ್ತಮವಾದ ಭೂಮಿ ಮಣ್ಣು ಇಲ್ಲದಿರುವುದು.

5) ಮೂಲಭೂತ ಸೌಕರ್ಯಗಳ ಕೊರತೆ.

ಅನುಬಂಧ-1

ರಾಜ್ಯದಲ್ಲಿರುವ ತೋಟಗಾರಿಕೆ ಕ್ಷೇತ್ರ: ಸಸ್ಯಾಗಾರಗಳು ಅವುಗಳ ವಿಸ್ತೀರ್ಣ ಹಾಗೂ ಖರ್ಚು ಮತ್ತು ಆದಾಯಗಳ ವಿವರ (1995-96)

ಕ್ರಮ ಸಂ.	ತೋಟಗಾರಿಕೆ ಕ್ಷೇತ್ರ: ಸಸ್ಯಗಾರಗಳ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)	ವೆಚ್ಚ	ಆದಾಯ	ಲಾಭದಾಯಕವೇ ನಷ್ಟದಾಯಕವೇ
1	2	3	4	5	6
	ಬೆಂಗಳೂರು ನಗರ				
	ಬೆಂಗಳೂರು ನಗರ ಜಿಲ್ಲೆ:				
1)	ಕೆಂಗೇರಿ ಸಸ್ಯಗಾರ	0.30	6.388-	39480/-	ನಷ್ಟದಾಯಕ
2)	ಇಂದಿರಾನಗರ ಸಸ್ಯಗಾರ	8.01	308239/-	250597/-	ನಷ್ಟದಾಯಕ
3)	ಹುಳಿಮಾವು ತೋಟಗಾರಿಕೆ ಕ್ಷೇತ್ರ	42.32	732500/-	524440/-	ನಷ್ಟದಾಯಕ
4)	ಕನ್ನಮಂಗಲ	157.25	661241/-	206016/-	ನಷ್ಟದಾಯಕ
5)	ಸುರಗಜಕ್ಕನಹಳ್ಳಿ ಅ.ತಾ.	14.00	160300/-	88250/-	ನಷ್ಟದಾಯಕ

1	2	3	4	5	6
	ಬೆಂಗಳೂರು ಗ್ರಾಮಾಂತರ ಜಿಲ್ಲೆ				
6)	ಕನಕಪುರ ತೋ.ಕೇ	11.20	129123/-	236746/-	ಲಾಭದಾಯಕ
7)	ರಾಮನಗರ ಸಸ್ಯಗಾರ	3.25	20964/-	113770/-	"
8)	ಬೈರಮಂಗಲ	5.00	21474/-	145817/-	"
9)	ಚನ್ನಪಟ್ಟಣ ಸಸ್ಯಾಗಾರ	2.10	9477/-	31977/-	"
10)	ಬಗಿನಿಗೆರೆ ಕಾವಲ್ ತೋ.ಕೇ.	180.00	100876/-	849890/-	"
11)	ತಿಪ್ಪಗೊಂಡನ ತೋ.ಕೇ	36.33	62960/-	524587/-	"
12)	ನೆಲಮಂಗಲ ಸಸ್ಯಗಾರ	1.00	20950/-	5227/-	ನಷ್ಟದಾಯಕ
13)	ಕೆ. ಪೂಜನಹಳ್ಳಿ ತೋ.ಕೇ.	27.00	52607/-	1865/-	"
14)	ದೇವನಹಳ್ಳಿ ತೋ.ಕೇ.	1.32	"	5006/-	ಲಾಭದಾಯಕ
15)	ದೊಡ್ಡಬಳ್ಳಾಪುರ ತೋ.ಕೇ.	20.00	45085/-	73436/-	"
	ಬೆಂಗಳೂರು ಗ್ರಾ. ಜಿಲ್ಲೆ (ಜಿಲ್ಲಾ ಪಂಚಾಯತ್)				
16)	ಬೈರಾಪಟ್ಟಣ ತೋ.ಕೇ	40.00	574328/-	1142223/-	ಲಾಭದಾಯಕ
	ಚನ್ನಪಟ್ಟಣ				
17)	ವಂದಾರಗುಪ್ಪೆ ತೇ.ಕೇ. ಚನ್ನಪಟ್ಟಣ ತಾ:	23.00	337579/-	488052/-	"
18)	ದಂಡುಪಾಳ್ಳಿ ತೋ ಕೇ ಎ ಹೊಸಕೋಟೆ ತಾ:	3.10	37510/-	60280/-	"
19)	ಹಾರೋಹಳ್ಳಿ ತೋ ಕೇ ಮಾಗಡಿ ತಾ:	26.00	100396/-	160255/-	"
	ಚಿತ್ರಗುರ್ಗ ಜಿಲ್ಲೆ (ರಾವ) ತೋ.ಕೇ:				
20)	ಕಛೇರಿ ನರ್ಸರಿ, ಚಿತ್ರಗುರ್ಗ	8.00	42000/-	44766/-	ಲಾಭದಾಯಕ
21)	ಟಿ.ಎನ್. ಕೆರೆ ಕ್ಷೇತ್ರ	15.00	16770/-	10000/-	ನಷ್ಟದಾಯಕ
22)	ವೇದವತಿ ಕ್ಷೇತ್ರ	6.00	21000/-	112880/-	ಲಾಭದಾಯಕ
23)	ಹಾಲುರಾಮೇಶ್ವರ ಕ್ಷೇತ್ರ	19.20	30070/-	25150/-	ನಷ್ಟದಾಯಕ
24)	ದಾವಣಗೆರೆ ಕಛೇರಿ ನರ್ಸರಿ	3.00	29827/-	28084/-	ನಷ್ಟದಾಯಕ

1	2	3	4	5	6
25)	ಆರ್.ಎಂ.ಪಿ.	12.20	13181/-	45489/-	ಲಾಭದಾಯಕ
26)	ಮಹದೇವಪುರ ತೋ ಕೇ	87.16	52400/-	159024/-	"
27)	ಐಯನಹಳ್ಳಿ ಕ್ಷೇತ್ರ	11.20	21000/-	775522/-	"
28)	ರಾಯಪುರ ಕ್ಷೇತ್ರ	130.00	42000/-	52586/-	"
	ಚಿತ್ರದುರ್ಗ ಜಿಲ್ಲೆ (ಜಿಲ್ಲಾ ಪಂಚಾಯತ್)				
29)	ಬಬ್ಬೂರೂ ಫಾರಂ	21.00	282485/-	168211/-	ನಷ್ಟದಾಯಕ
30)	ಸಿರಿಗೇರಿ ತೋ.ಕೇ	2.20	125282/-	38936/-	"
31)	ನಲ್ಲಿಕಟ್ಟೆ ತೋ. ಕೇ	29.00	19717/-	-	"
32)	ಚಿತ್ರಹಳ್ಳಿ ತೋ ಕೇ	30.00	288894/-	73899/-	"
33)	ಬುಳ್ಳಾಪುರ ತೋ ಕೇ	10.00	281073/-	145159/-	"
34)	ಅವರಗೊಳ್ಳ ತೋ ಕೇ	48.00	281073/-	199410/-	"
35)	ಕಛೇರಿ ನರ್ಸರಿ ತೋಕೇ ಚಳ್ಳಕೆರೆ	-	88616/-	500/-	"
36)	ತಮ್ಮೇನಹಳ್ಳಿ ತೋ ಕೇ	76.22	281874/-	75941/-	"
37)	ಜಗಳೂರು ವ್ಯಾಸಗೊಂಡನಹಳ್ಳಿ	21.36	251540/-	139000/-	"
38)	ಕಛೇರಿ ಸಸ್ಯಗಾರ ಜಗಳೂರು	1.08	77890/-	4000/-	"
	ಕೋಲಾರ (ರಾಜ್ಯ ವಲಯ) ತೋ ಕೇ				
39)	ಜಿಲ್ಲಾ ನರ್ಸರಿ	6.20	431487/-	161198/-	"
40)	ಮಾಲೂರು ತಾ: ನರ್ಸರಿ	0.20	-	3737/-	"
41)	ಬಂಗಾರಪೇಟೆ ತಾ: ನರ್ಸರಿ	1.30	281453/-	10627/-	"
42)	ಮುಳಬಾಗಿಲು ತಾಃ ನರ್ಸರಿ	0.03	14158/-	691/-	"
43)	ಚಿಂತಾಮಣಿ ತಾ: ನರ್ಸರಿ	0.08	30964/-	4351/-	"
44)	ಶಿಡ್ಲಘಟ್ಟ ತಾ: ನರ್ಸರಿ	3.10	124395/-	31939/-	"
45)	ಚಿಕ್ಕಬಳ್ಳಾಪುರ ತಾ: ನರ್ಸರಿ	-	910712/-	157376/-	"
46)	ದೊಡ್ಡಶಿವಾರ ಕ್ಷೇತ್ರ	9.00	-	-	"
47)	ವಿವಿಣಕನಗುರ್ಕಿ ಕ್ಷೇತ್ರ	1.20	-	-	"

1	2	3	4	5	6
48)	ಪಸಪಲೋಡು ತೋ ಕೇ	33.00	-	50880/-	"
49)	ಮಾದಿಕೆರೆ ತೋ ಕೇ	10.00	-	-	"
50)	ತಿರುಪತಿ ತೋ ಕೇ	-	72150/-	-	"
51)	ಟಮಕ ತೋ ಕೇ	58.33	1431487/-	59084/-	"
52)	ಜೆ. ವಮ್ಮಸಂದ್ರ ಕ್ಷೇತ್ರ	104.25	1275346/-	634830/-	"
53)	ಹೊಗಳಕೆರೆ ಕ್ಷೇತ್ರ	500.00	1735292/-	830886/-	"
54)	ಪಿ.ಆರ್. ಎಸ್. ತೋ ಕೇ	62.05	910712/-	157376/-	"
55)	ಚಿಕ್ಕದಾಸರಹಳ್ಳಿ ಮಾವಿನ ಕ್ಷೇತ್ರ	38.00	848256/-	157636/-	"
56)	ಚಿಕ್ಕದಾಸರಹಳ್ಳಿ ತೋ ಕೇ	300.00	660920/-	132140/-	"
	ಕೋಲಾರ (ಜಿ.ಪಂ) ತೋಟಗಾರಿಕೆ ಕ್ಷೇತ್ರ):				
57)	ಚವ್ವೇನಹಳ್ಳಿ ತೋ ಕೇ	75.00	241002.00	160931.00	ನಷ್ಟದಾಯಕ
58)	ಕುಪ್ಪನಹಳ್ಳಿ ತೋ ಕೇ	11.14	258472.00	75358.00	ಲಾಭದಾಯಕ
59)	ಗುಟ್ಟಹಳ್ಳಿ ತೋ ಕೇ	3.00	26811.00	12214.00	ನಷ್ಟದಾಯಕ
60)	ಕೆ ಜಿ ಎಫ್ ಸಸ್ಯಗಾರ	9.20.	27281.00	1611.00	ನಷ್ಟದಾಯಕ
61)	ಶ್ರೀನಿವಾಸಪುರ ತಾ ಸಸ್ಯಗಾರ	2.88	45147.00	63759.00	ಲಾಭದಾಯಕ
62)	ಮೊಗಲಹಳ್ಳಿ ಫಾರಂ	5.00	37475.00	6700.00	ನಷ್ಟದಾಯಕ
63)	ಮುದ್ದೇನಹಳ್ಳಿ ತೋ ಕ್ಷೇ	6.12	147209.00	42590.00	"
64)	ಪೆಟ್ರೇನಹಳ್ಳಿ ತೋ ಕ್ಷೇ	10.20	28074.00	125000.00	ಲಾಭದಾಯಕ
65)	ಪೆರುಮಾಚನಹಳ್ಳಿ ತೋ ಕ್ಷೇ	4.20	30050.00	3001.00	ನಷ್ಟದಾಯಕ
66)	ಗುಡಿಬಂಡೆ ತಾ ಸಸ್ಯಾಗಾರ	1.00	7845.00	37083.00	"
67)	ಗರುಡಾರ್ಲಹಳ್ಳಿ ತೋ ಕ್ಷೇ	13.38	78175.00	8425.00	"
68)	ಚೌಡಸಂದ್ರ ತೋ ಕ್ಷೇ	10.20	104577.00	79418.00	"
69)	ಕೆರೆಕಲ್ಲಹಳ್ಳಿ ತೋ ಕ್ಷೇ	39.05	305210.00	10520.00	"
70)	ಬಾಗೇಪಲ್ಲಿ ತಾ ಸಸ್ಯಾಗಾರ	0.20	3670.00	3663.00	"
71)	ಚನ್ನವಲ್ಲೆ ತಾ ಕ್ಷೇ	10.00	623018.00	153023.00	"

1	2	3	4	5	6
	ತುಮಕೂರು ಜಿಲ್ಲೆ (ರಾಜ್ಯ ವಲಯ)				
72)	ಜಿಲ್ಲಾ ಸಸ್ಯಾಗಾರ	9.1	378920.00	129549.00	”
73)	ರಾಜದಂತಿ ಕ್ಷೇತ್ರ	32.00	242092.00	45407.00	”
74)	ಇಂದಿರಾ ತೋ ಕ್ಷೇ	120.00	735384-00	124453.00	”
75)	ಶಿರಾ ಸಸ್ಯಾಗಾರ	1.00	-	4654.00	ಲಾಭದಾಯಕ
76)	ಜೆ.ಸಿ. ಪುರ ತೋ ಕ್ಷೇ	54.38	503100.00	167149.00	ನಷ್ಟದಾಯಕ
77)	ರಂಗಸ್ವಾಮಿಗುಡ್ಡ ತೋ ಕ್ಷೇ	350.00	546893.00	241674.00	”
78)	ಕುಣಿಗಲ್ ತೋ ಕ್ಷೇ	0.20	5972.00	2686.00	”
79.	ನಿಡುವಳಲು ತೋ ಕ್ಷೇ	171.16	508060.00	1296299.00	ಲಾಭದಾಯಕ
80)	ಮೊರ್ಕೋನಹಳ್ಳಿ ತೋ ಕ್ಷೇ	53.40	453619.00	1370044.00	”
81)	ಬಿಳಿದೇವಾಲಯ ತೋ ಕ್ಷೇ	8.24	184229.00	8341.00	ನಷ್ಟದಾಯಕ
82)	ಮಂಗಳ ತೋ ಕ್ಷೇ	57.00	121148.00	7400.00	”
83)	ಹೇರೂರು ತೋ ಕ್ಷೇ	33.00	454169.00	-	”
84)	ಮಾಧಿಹಳ್ಳಿ ತೋ ಕ್ಷೇ	50.00	409219.00	279554.00	”
85)	ದರ್ಮವೀರ ತೋ ಕ್ಷೇ ಬಳ್ಳಾರಿ	1650.00	1678972.00	37014.00	”
86)	ದೊಡ್ಡಸಾಗ್ಗರೆ	1045.00	1849775.00	1346811.00	”
	ತುಮಕೂರು (ಜಿ ಪಂ) ತೋಟಗಾರಿಕೆ ಕ್ಷೆತ್ರ:				
87)	ಮತಿಗಟ್ಟ ತೋ ಕ್ಷೇ	19.00	243503.00	454169.00	ಲಾಭಾಯಕ
88)	ಮಡ್ಡಗೆರೆ ತೋ ಕ್ಷೇ	4.30	124453.00	735384.00	”
89)	ಮೂದಿಗೆರೆ ತೋ ಕ್ಷೇ ಶಿರಾ ತಾ:	36.11	129548.00	378384.00	”
	ಶಿವಮೊಗ್ಗ (ರಾಜ್ಯ ವಲಯ) ತೋ ಕ್ಷೇ:				
90)	ಸೀಬಿನಕೆರೆ ತೋ ಕ್ಷೇ	43.33	129302.00	821200.00	ಲಾಭದಾಯಕ
91)	ಕುರವಳ್ಳಿ ತೋ ಕ್ಷೇ	60.05	132406.00	320065.00	”
92)	ಬಿ.ಆರ್.ಪಿ. ತೋ ಕ್ಷೇ	60.15	31390.00	148370.00	”
93)	ಯಳವರಸಿ ತೋ ಕ್ಷೇ	110.00	134725.00	250451.00	”

1	2	3	4	5	6
94)	ಕೊಡಕಣಿ ತೋ ಕ್ಷೇ	37.00	494947.00	496525-00	"
95)	ಕಾಳೇನಹಳ್ಳಿ ತೋ ಕ್ಷೇ	30.00	39659.00	92262.00	"
96)	ಬೇಲಿದುಲ್ಲೂರು ತೋ ಕ್ಷೇ	25.00	105728.00	423879.00	"
97)	ತುಂಗಾ ತೋ ಕ್ಷೇ	6.14	6585.00	164878.00	"
98)	ಡಿ.ಸಿ. ಕಾಂಪೌಂಡ್ ಸಸ್ಯಾಗಾರ	4.02	31375.00	42643.00	"
99)	ಜಿಲ್ಲಾ ನರ್ಸರಿ ಶಿವಮೊಗ್ಗ	3.00	4040.00	6900.00	"
	ಶಿವಮೊಗ್ಗ (ಜಿ ಪಂ) ತೋ ಕ್ಷೇ				
100)	ಭದ್ರಾವತಿ ಸಸ್ಯಾಗಾರ	2.00	292581.00	62742-00	"
101)	ಚನ್ನಗಿರಿ ತೋ ಕ್ಷೇ	75.00	341161.00	360761.00	"
102)	ಶಿಕಾರಿಪುರ ತೋ ಕ್ಷೇ	1.20	64436.00	56695-00	"
103)	ಹೊಸನಗರ ಗಂಗಾನಕೊಪ್ಪ	33.20	11820-00	142178.00	"
104)	ತೀರ್ಥಹಳ್ಳಿ ತೋ ಕ್ಷೇ	22.03	20488.00	178756.00	"
	ಮೈಸೂರು ವಿಭಾಗ:				
	ರಾಜ್ಯ ವಲಯ : ಮೈಸೂರು ಜಿಲ್ಲೆ:				
1)	ರಂಗಸಮುದ್ರ ತೋ ಕ್ಷೇ	16.00	563737	228238.00	ನಷ್ಟದಾಯಕ
2)	ಬೀಮನಕೊಲ್ಲಿ ತೋ ಕ್ಷೇ	196.00	467049.00	10406.00	"
3)	ಸುವರ್ಣಾವತಿ ತೋ ಕ್ಷೇ	17.20	969331.00	58910.00	"
4)	ಕಬಿನಿ ತೋ ಕ್ಷೇ	52.20	725584-00	96067.00	"
5)	ಬಾಗಳಿ ತೋ ಕ್ಷೇ	331.20	773232.00	120648.00	"
6)	ಯಲಚನಹಳ್ಳಿ ತೋ ಕ್ಷೇ	398.23	2315727.00	166085.00	"
7)	ಉದ್ಯಾನವನ ಮತ್ತು ತೋಟಗಳು ಕರ್ಜನ್ ಪಾರ್ಕ್, ಮೈಸೂರು	-	4977953.00	131472.00	"
8)	ತಾರಕ ತೋ ಕ್ಷೇ	15.00	235755.00	35130-00	"
9)	ಕೆ.ಕೆ. ಟ್ಯಾಂಕ್ ತೋ ಕ್ಷೇ	28.00	956048.00	22968.00	"
10)	ಬಿಳಿಗಿರಿರಂಗನಬೆಟ್ಟ ತೋ ಕ್ಷೇ	24.31	418388-00	7060.00	"

1	2	3	4	5	6
11)	ಗುಂಡಾಲ್ ತೋ ಕ್ಷೇ	54.38	342721.00	14169.00	”
12)	ನುಗು ತೋ ಕ್ಷೇ	41.20	608492.00	166570.00	”
13)	ಹೆಚ್.ಡಿ. ಕೋಟೆ ತೋ ಕ್ಷೇ	7.00	256796.00	24741.00	”
14)	ಹುಣಸೂರು	16.00	637026.00	32516.00	”
15)	ನಂಜನಗೂಡು	5.00	22343.00	41517.00	”
	ಮೈಸೂರು ಜಿಲ್ಲೆ (ಜಿಲ್ಲಾ ಪಂಚಾಯತ್):				
16)	ಹರಪನಹಳ್ಳಿ ತೋ ಕ್ಷೇ	16.00	81949.00	4150.00	”
17)	ಗುಂಡ್ಲುಪೇಟೆ ತೋ ಕ್ಷೇ	16.23	295942.00	119167.00	”
18)	ಗಂಡ್ಲುಪೇಟೆ ಸಸ್ಯಾಗಾರ	0.22	158266.00	47133.00	”
19)	ವಾರಂಟಿ ತೋ ಕ್ಷೇ	50.00	230793.00	243786.00	”
20)	ಕರಿಮುದ್ದನಹಳ್ಳಿ ತೋ ಕ್ಷೇ	12.00	156867	314128-00	”
21)	ಕೊಳ್ಳೇಗಾಲ ಸಸ್ಯಾಗಾರ	-	119117.00	34369-00	”
22)	ಮಲೇಮಹದೇಶ್ವರಬೆಟ್ಟ ತೋ ಕ್ಷೇ	18.00	320918.00	112855.00	”
23)	ಚೌಕಳಿ ತೋ ಕ್ಷೇ	-	137781.00	26510.00	ಲಾಭದಾಯಕ
24)	ಕೆ.ಆರ್ ನಗರ ಸಸ್ಯಾಗಾರ	2.20	65116.00	14125.00	ನಷ್ಟದಾಯಕ
25)	ಪಿರಿಯಾಪಟ್ಟಣ ತೋ ಕ್ಷೇ	2.20	123297.00	49614.00	”
26)	ನೀಲಸೋಗೆ ತೋ ಕ್ಷೇ	17.00	004.00.00	0000.00	”
27)	ಟೀ ನರಸೀಪುರ ಸಸ್ಯಾಗಾರ	2.20	442351.00	71036.00	”
28)	ಬನ್ನೂರು	9.00	63369.00	20384.00	”
29)	ಹರಹೆಹಳ್ಳಿ ತೋ ಕ್ಷೇ	20.00	11297.00	269316.00	ಲಾಭದಾಯಕ
30)	ಯಲಿಯೂರು ತೋ ಕ್ಷೇ	3.20	61665.00	855.00	ನಷ್ಟದಾಯಕ
31)	ವಡ್ಡಗೆರೆ ತೋ ಕ್ಷೇ	8.37	227812.00	20334.00	”
	ಹಾಸನ ಜಿಲ್ಲೆ:				
32)	ಆಲೂರು ತೋ ಕ್ಷೇ	27.14	2711042/-	5187/-	ನಷ್ಟದಾಯಕ

1	2	3	4	5	6
33)	ಬೆಹಚನಹಳ್ಳಿ ತೋ ಕ್ಷೇ	14.00	307107/-	1214/-	"
34)	ಬಾಗೇನಕಲೇಶಪುರ ತೋ ಕ್ಷೇ	350.00	394142/-	1114/-	"
35)	ಜೋರಗಲ್ ತೋ ಕ್ಷೇ	100.00	467437/-	28965/-	"
36)	ಕೊನ್ನೇರಲು ತೋ ಕ್ಷೇ	28.42	247318/-	49344/-	"
37)	ಅಮ್ಮಕಟ್ಟ ತೋ ಕ್ಷೇ	59.00	401607/-	96462/-	"
38)	ಸೋಮನಹಳ್ಳಿಕಾವಲ್ ತೋ ಕ್ಷೇ	355.00	1180681/-	219568/-	ಲಾಭದಾಯಕ
39)	ಅರಸೀಕೆರೆ ತೋ ಕ್ಷೇ	6.00	186708/-	53200/-	ನಷ್ಟದಾಯಕ
40)	ಡಿ.ಸಿ. ಕಾಂಪೌಂಡ್	5.00	242286/-	52338/-	"
41)	ಎಸ್.ಜಿ. ಒ. ಹಾಸನ	5.10	264825/-	1270/-	"
42)	ಗೊರೂರು ತೋ ಕ್ಷೇ	31.20	509125/-	339565/-	"
	ತೋಟಗಾರಿಕೆ ಉಪ ನಿರ್ದೇಶಕರು (ಜಿ ಪಂ)				
43)	ಚೀಲನಾಯಕನಹಳ್ಳಿ ತೋ ಕ್ಷೇ	63.32	195391/-	130143/-	"
44)	ಕೊಂಗಲಬೀಡು ತೇ ಕ್ಷೇ	15.00	106075/-	16620/-	ಲಾಭದಾಯಕ
45)	ಯಲಿಯೂರು ತೋ ಕ್ಷೇ	50.00	182560/-	518467/-	"
46)	ಬಾಗೇ ಸಕಲೇಶಪುರ	30.00	72777/-	6477/-	"
47)	ಸಕಲೇಶಪುರ ಸಸ್ಯಾಗಾರ	1.20	1432/-	75000/-	ನಷ್ಟದಾಯಕ
48)	ಕಚೇರಿ ಕ್ಷೇತ್ರ, ಹೊಳೆನರಸೀಪುರ	0.30			"
	ಕೊಡಗು ಜಿಲ್ಲೆ (ರಾಜ್ಯ ವಲಯ)				
49)	ತೋಟಗಾರಿಕೆ ಸಹಾಯಕ ಸಸ್ಯಾಗಾರ,ಮಡಿಕೇರಿ	1.00	253591/-	35166/-	"
50)	ತೋ ಕ್ಷೇ: ಪೊನ್ನಾಂಪೇಟೆ	8.20	307400/-	36685/-	"
51)	ತೋ ಕ್ಷೆ: ಮಾದಾಪುರ	100.00	161600/-	100771/-	"
52)	ತೋ ಕ್ಷೇ: ಮಾದಾಪುರ	288.00	1237187/-	262095/-	"
53)	ತೋ ಕ್ಷೇ: ಹಾರಂಗಿ	223.00	387000/-	196602/-	"
	ತೋಟಗಾರಿಕೆ ಉಪ ನಿರ್ದೇಶಕರು ಮಡಿಕೇರಿ:				

1	2	3	4	5	6
	ಕೊಡಗು ಜಿಲ್ಲೆ: (ಜಿಲ್ಲಾ ಪಂಚಾಯತ್)				
54)	ಬೆಳಗುಂಡ ತೋ ಕ್ಷೇ	9.00	53927/-	90588/-	”
55)	ಕೊಡಿಗೆ ತೋ ಕ್ಷೇ	12.00	48041/-	25127/-	”
56)	ಅರವ ತೊಕಲು ತೋ ಕ್ಷೇ	9.24	103680/-	70766/-	”
57)	ನಾಪೊಕ್ಲು ತೋ ಕ್ಷೇ	30.00	66729/-	87578/-	”
	ಮಂಡ್ಯ ಜಿಲ್ಲೆ (ರಾಜ್ಯ ವಲಯ)				
58)	ಮಂಡ್ಯ ತೋ ಕ್ಷೇ	14.00			”
59)	ಗುಂಜಾಂ ತೋ ಕ್ಷೇ	50.00	365751/-	113891/-	”
60)	ಪಾಂಡವಪುರ ತೋ ಕ್ಷೇ	44.00	45506/-	7655/-	ನಷ್ಟದಾಯಕ
61)	ಚಿಕ್ಕಅಂಕನಹಳ್ಳಿ ತೋ ಕ್ಷೇ	29.00	109858/-	-	”
62)	ನವಿಲೆ ತೋ ಕ್ಷೇ	8.32	31502/-	-	”
63)	ಪೊರಿಗಾಲಿ ತೋ ಕ್ಷೇ	182.00	538424/-	3280/-	”
64)	ಜವರಹಳ್ಳಿ ತೋ ಕ್ಷೇ	55.00	661700/-	403173/-	”
65)	ನಾಗಮಂಗಲ ಸಸ್ಯಾಗಾರ	1.00	3997/-	3851/-	”
66)	ನಾಯಕನಹಳ್ಳಿ ತೋ ಕ್ಷೇ	190.00	612412/-	112161/-	”
67)	ಮಲ್ಲನಸಂದ್ರ ಕಾವಲ್ ತೋ ಕ್ಷೇ	887.00	1121380/-	111611/-	”
68)	ಮದೂರು ತೋ ಕ್ಷೇ	44.00	993912/-	386116/-	”
69)	ಮಂಡ್ಯ ಆಸ್ಪತ್ರೆ ತೋಟ	7.05	275684/-	95640/-	”
70)	ಸತ್ಯಾಗ್ರಹ ಭವನ, ಶಿವಪುರ	4.20	243174/-	7758/-	”
71)	ಕಾವೇರಿ ಬವನ್ ಬವ್ಯವನ ಮಂಡ್ಯ	7.25	237942/-	271/-	”
	ಜಿಲ್ಲಾ ಪಂಚಾಯತ್:				
72)	ಶ್ರೀರಂಗಪಟ್ಟಣ ನರ್ಸರಿ ಗಾಮನಹಳ್ಳಿ ಫಾರಂ	17.00	227745/-	375805/-	ಲಾಭದಾಯಕ
73)	ಹಳೇಬೀಡು ತೋ ಕ್ಷೇ ಪಾಂಡವಪುರ ತಾ:	44.00	209848/-	523084/-	”

1	2	3	4	5	6
74)	ಮರುಕನಹಳ್ಳಿ ಶೀಳನೆರೆ ತೋ ಕ್ಷೇ	44.10	191334/-	722300/-	"
75)	ಮದ್ದೂರು ಸಸ್ಯಾಗಾರ	1.20	1710/-	5965/-	"
76)	ಶಿವನಹಳ್ಳಿ ಮಂಡಹಳ್ಳಿ ಸಸ್ಯಾಗಾರ ಮಂಡ್ಯ ತಾ	51.00	613433/-	773107/-	"
77)	ಮಳವಳ್ಳಿ ತಾ ನರ್ಸರಿ	2.20	47530/-	38215/-	ನಷ್ಟದಾಯಕ
	ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ (ರಾವ್)				
78)	ಜಿಲ್ಲಾ ಸಸ್ಯಾಗಾರ, ಮಂಗಳೂರು	1.20	12081/-	64802/-	ಲಾಭದಾಯಕ
79)	ಮಾದರಿ ತೋ ಕ್ಷೇ ಪಡೀಲ್ ಮಂಗಳೂರು.	20.20	47939/-	58585/-	"
80)	ಕಟಕ ತೋ ಕ್ಷೇ, ಪುತ್ತೂರು	3.20	20959/-	18996/-	ನಷ್ಟದಾಯಕ
81)	ಸೂಳ್ಯ ತೋ ಕ್ಷೇ ಸೂಳ್ಯ	19.34	31354/-	59452/-	"
82)	ರಾಮಸಮುದ್ರ ತೋ ಕ್ಷೇ, ಕಾರ್ಕಳ	196.30	8420/-	276882/-	"
83)	ಬಳ್ತಂಗಡಿ ಕಛೇರಿ ಸಸ್ಯಾಗಾರ ಬೆಲ್ತಂಗಡಿ	1.36	28992/-	57718/-	"
84)	ಮುದ್ದಡ್ಕ ಕ್ಷೇತ್ರ, ಬೆಳ್ತಂಗಡಿ	115.00	6.985/-	93045/-	"
85)	ಚಾರ್ಮುಗಿ ಕ್ಷೇತ್ರ, ಬೆಳ್ತಂಗಡಿ	120.00	28992/-	46337/-	"
86)	ಶಿವಳ್ಳಿ ಕ್ಷೇತ್ರ, ಉಡುಪಿ	27.20	52992/-	177612/-	"
87)	ಕಛೇರಿ ಸಸ್ಯಾಗಾರ, ಕಾರ್ಕಳ	3.15	3989/-	2679/-	ನಷ್ಟದಾಯಕ
88)	ಕಛೇರಿ ಸಸ್ಯಾಗಾರ, ಉಡುಪಿ	1.18	7525/-	13747/-	ಲಾಭದಾಯಕ
	ಮಂಗಳೂರು (ಜಿಲ್ಲಾ ಪಂಚಾಯತ್)				
89)	ವಾರಂಬಳ್ಳಿ ತೋ ಕ್ಷೇ ಉಡುಪಿ ತಾ:	4.30	64862.00	17664.00	ನಷ್ಟದಾಯಕ
90)	ಕುಂದಾಪುರ ಕಛೇರಿ, ಸಸ್ಯಗಾರ	0.01	-	22415.00	ಲಾಭದಾಯಕ
91)	ಕೇದೂರು ತೋ ಕ್ಷೇ, ಕುಂದಾಪುರ	12.20	37455.00	14031.00	ನಷ್ಟದಾಯಕ
92)	ಕುಂಬಾತಿ ತೋ ಕ್ಷೇ, ಕುಂದಾಪುರ	25.20	34990.00	16080.00	"
93)	ಬರಟ್ವಾಳ ಕಛೇರಿ ಸಸ್ಯಾಗಾರ	0.20	12245.00	82483.00	"

1	2	3	4	5	6
94)	ವಿಟ್ಲ ತೋ ಕ್ಷೇ,, ಬಂಟ್ವಾಳ ತಾ :	12.22	19145.00	16664.00	”
95)	ತುಂಬೆ ತೋ ಕ್ಷೇ, ಬಂಟ್ವಾಳ ತಾ:	28.39	83016.00	40075.00	”
96)	ಕುಕ್ಕುಂದೂರು ಕ್ಷೇತ್ರ, ಕಾರ್ಕಳ	15.00	-	110735.00	ಲಾಭದಾಯಕ
	ಚಿಕ್ಕಮಗಳೂರು ಜಿಲ್ಲೆ (ರಾವ್)				
97)	ಪುಸತೋನಿ, ಚಿಕ್ಕಮಗಳೂರು (ರಾವ್	-	25766.00	-	ನಷ್ಟದಾಯಕ
98)	ಕಛೇರಿ ಸಸ್ಯಾಗಾರ, ಚಿಕ್ಕಮಗಳೂರು	1.20	31400.00	52703.00	ಲಾಭದಾಯಕ
99)	ಸತೋನಿ (ರಾವ್) ಮೂಡಿಗೆರೆ	38.00	94296.00	158681.00	”
100)	ಸತೋನಿ, ಕಣಬೂರು	30.20	102696.00	21089.00	ನಷ್ಟದಾಯಕ
101)	ಸತೋಲಿ, ಕೊಪ್ಪ	5.11	64447.00	19038.00	”
102)	ಕಡೂರು	12.32	45475.00	5670.00	”
103)	ತರಿಕೆರೆ	10.04	-	88380.00	ಲಾಭದಾಯಕ
	ಚಿಕ್ಕಮಗಳೂರು ಜಿಲ್ಲೆ (ಜಿಲ್ಲಾ ಪಂಚಾಯತ್)				
104)	ದಂಟಮಕ್ಕಿ ತೋ ಕ್ಷೇ	9.20	159387.00	99015.00	ನಷ್ಟದಾಯಕ
105)	ಸರ್ಕಾಯಪಟ್ಟಣ ತೋ ಕ್ಷೇ	100.00	90681.00	49335.00	”
106)	ಬೆಳಕಿನಕೆರೆ ತೋ ಕ್ಷೇ	25.00	37770.00	-	”
107)	ನರಸಿಂಹರಾಜಪುರ ತೋ ಕ್ಷೇ	12.08	54395.00	107503.00	ಲಾಭದಾಯಕ
108)	ಶೃಂಗೇರಿ	8.32	8513.00	51334.00	”
109)	ಕಳಸ ತೋ ಕ್ಷೇ	25.00	76998.00	128661.00	”
110)	ಹರಿಹರ ತೋ ಕ್ಷೇ	7.32	-	-	”
	ಬೆಳಗಾವಿ ವಿಭಾಗ:				
1)	ಜಿಲ್ಲಾ ನರ್ಸರಿ ಬೆಳಗಾಂ	1.30	60634.00	12178.00	ಲಾಭದಾಯಕ
2)	ಕಿತ್ತೂರು ಕ್ಷೇತ್ರ, ಬೈಲಹೊಂಗಲ	7.20	21257.00	49722.00	”
3)	ಶೇಡಿಗಳ ಕ್ಷೇತ್ರ, ಖಾನಾಪುರ	30.01	13823.00	254242.00	”
4)	ರಾಮದುರ್ಗ ಸಸ್ಯಾಗಾರ, ರಾಮದುರ್ಗ		30687.00	3760.00	ನಷ್ಟದಾಯಕ

1	2	3	4	5	6
5)	ಸವದತ್ತಿ ನರ್ಸರಿ, ಸವದತ್ತಿ	0.20	16668.00	373.00	"
6)	ಯುಕ್ಕೇರಿ ಕ್ಷೇತ್ರ, ಸವದತ್ತಿ	21.00	52176.00	22237.00	"
7)	ಉಗರಗೋಳ ಕ್ಷೇತ್ರ, ಸವದತ್ತಿ	15.00	31306.00	11889.00	"
8)	ದೂಪದಾಳ್ ಕ್ಷೇತ್ರ, ಗೋಕಾಕ್	25.00	124080.00	87014.00	"
9)	ಚಿಕ್ಕೋಡಿ ಸಸ್ಯಾಗಾರ	3.00	20306.00	6658.00	"
10)	ಹಿಡ್ಕಲ್ ಕ್ಷೇತ್ರ,ಹುಡ್ಕೇರಿ ತಾ:	9.00	10125.00	106827.00	ಲಾಭದಾಯಕ
11)	ಹಿಡ್ಕಲ್ ತೆಂಗಿನ ಕ್ಷೇತ್ರ	20.00	10305.00	52807.00	"
12)	ಡೈಕ್-1, ಹಿಡ್ಕಲ್	40.00	10125.00	3624.00	"
13)	ಡೈಕ್-11, ಹಿಡ್ಕಲ್	28.00	-	65157.00	"
14)	ಪುಷ್ಪಾಭಿವೃದ್ಧಿ ಕ್ಷೇತ್ರ	3.00	99998.00	17789.00	"
15)	ಹುಲ್ಲೆಪಾರ್ಕ್, ಬೆಳಗಾಂ	21.20	198220.00	29410.00	"
	ಬೆಳಗಾಂ ಜಿಲ್ಲೆ (ಜಿಲ್ಲಾ ಪಂಚಾಯತ್)				
16)	ಕುರುವಿನಕೊಪ್ಪ, ತೋ ಕ್ಷೇ	4.03	126917.00	28003.00	ನಷ್ಟದಾಯಕ
17)	ಮನೋಳಿ ತೋ ಕ್ಷೇ, ಸವದತ್ತಿ	30.00	142599.00	29992.00	"
18)	ಸಾಗರ ಮುನ್ನೋನಿ ತೋ ಕ್ಷೇ, ಚಿಕ್ಕೋಡಿ	3.00	56906.00	3725.00	"
19)	ಮೇಕಳಿ ತೋ ಕ್ಷೇ, ರಾಯಬಾಗ್	19.20	170839.00	50020.00	"
20)	ಶಿವವೇರ್ ತೋ ಕ್ಷೆ, ರಾಮದುರ್ಗ	13.00	129609.00	10090.00	"
21)	ಕಛೇರಿ ನರ್ಸರಿ, ಬೈಲಹೊಂಗಲ	0.04	3900.00	1777.00	"
22)	ಚನ್ನಮ್ಮ ಸಮಾಧಿ, ಬೈಲಹೊಂಗಲ	1.10	32000.00	-	"
23)	ಲಕ್ಷ್ಮೀಟೆಡ್ ತೋ ಕ್ಷೇ, ಬೆಳಗಾಂ	13.00	264444.00	84486.00	"
24)	ಗುಂಡೆವಾಡಿ ತೋ ಕ್ಷೇ, ಅಥಣಿ	72.15	24168.00	9868.00	"
25)	ಗುಡಸ ತೋ ಕ್ಷೇ, ಹುಕ್ಕೇರಿ	1.29	14555.00	-	"
26)	ನಸಲಾಪುರ ತೋ ಕ್ಷೇ, ರಾಯಬಾಗ್	21.01	-	-	"
27)	ಕಛೇರಿ ನರ್ಸರಿ, ಹುದ್ದೇರಿ	-	-	-	"

1	2	3	4	5	6
	ಬಿಜಾಪುರ ಜಿಲ್ಲೆ (ರಾಜ್ಯ ವಲಯ)				
28)	ಅಲಮಟ್ಟಿ ಕ್ಷೇತ್ರ	150.00	305577.00	43172.00	"
29)	ಬಾಗಲಕೋಟೆ ತೋ ಕ್ಷೇ	10.32	246746.00	62083.00	"
30)	ಬಿಜಾಪುರ ಕ್ಷೇತ್ರ, ವಿಜಾಪುರ	15.18	448942.00	193059.00	"
31)	ದೇವರಹಿಪ್ಪರಗಿ ಕ್ಷೇತರ, ವಿಜಾಪುರ	9.13	298356.00	106623.00	"
32)	ಇಂಡಿ ಕ್ಷೇತ್ರ, ಬಿಜಾಪುರ	18.20	343372/-	32364/-	ನಷ್ಟದಾಯಕ
33)	ಜಮಖಂಡಿ ಕ್ಷೇತ್ರ "	5.15	351744/-	78851/-	"
34)	ಬಸವನ ಸಸ್ಯಾಗಾರ "	3.00	96504/-	1002/-	"
	ಬಿಜಾಪುರ ಜಿಲ್ಲೆ (ಜಿಲ್ಲಾ ಪಂಚಾಯತ್)				
35)	ಬಿಳಿಗಿರಿಯಹಳ್ಳಿ ತೋ ಕ್ಷೇ	50.00	245718/-	471595/-	ಲಾಭದಾಯಕ
36)	ಸಿಂದಗಿ ಅಲಮೇಲ ಕ್ಷೇತ್ರ	50.00	326267/-	111200/-	ನಷ್ಟದಾಯಕ
37)	ಬಾದಾಮಿ ಬನಶಂಕರಿ ನರ್ಸರಿ	4.00	129232/-	4288/-	"
38)	ಮುದ್ದೋಳ್	1.20	34746/-	31891/-	"
39)	ಹುನಗುಂದ ನರ್ಸರಿ	1.24	44938/-	15284/-	"
40)	ಜಿಲ್ಲಾ ನರ್ಸರಿ ವಿಜಾಪುರು	1.00	329453/-	25568/-	"
	ಧಾರವಾಡ ಜಿಲ್ಲೆ (ರಾಜ್ಯ ವಲಯ)				
41)	ಜಿಲ್ಲಾ ನರ್ಸರಿ, ಧಾರವಾಡ	1.27	37846/-	57528/-	ಲಾಭದಾಯಕ
42)	ಯತ್ತಿನಹಳ್ಳಿ ಕ್ಷೇತ್ರ, ಯತ್ತಿನಳ್ಳಿ	26.00	48691/-	3855/-	ನಷ್ಟದಾಯಕ
43)	ಸವಣೂರು ತೋ ಕ್ಷೇ, ಸವಣೂರು	13.00	29996/-	11204/-	"
44)	ಕಛೇರಿ ನರ್ಸರಿ, ಸವಣೂರು	0.03	3998/-	1182/-	"
45)	ದುಮ್ಮವಾಡ ತೋ ಕ್ಷೇ	10.00	36477/-	73360/-	ಲಾಭದಾಯಕ
46)	ಬ್ಯಾಡಗಿ ತೋ ಕ್ಷೇ ಬ್ಯಾಡಗಿ	7.06	12494/-	16558/-	"
47)	ಲಕ್ಷ್ಮೇಶ್ವರ ತೋ ಕ್ಷೇ	3.00	12494/-	4695/-	ನಷ್ಟದಾಯಕ
48)	ಹುಬ್ಬಳ್ಳಿ ನರ್ಸರಿ, ಹುಬ್ಬಳ್ಳಿ	0.06	8500/-	4567/-	"

1	2	3	4	5	6
49)	ಹಾವೇರಿ ನರ್ಸರಿ, ಹಾವೇರಿ	0.01	10333/-	2900/-	"
50)	ಹರೇಕೆರೂರು ನರ್ಸರಿ	0.03	5328/-	-	
51)	ಮುಂಡರಗಿ ಕಛೇರಿ ನರ್ಸರಿ	-	-	-	
52)	ಜಗಜೂರು ತೋ ಕ್ಷೇ	18.00	-	-	
53)	ಎಂ.ಪಿ.ಪಿ.ಒ. ಕ್ಷೇತ್ರ, ಗದಗ	27.00	48991/-	42269/-	ನಷ್ಟದಾಯಕ
54)	ಕಛೇರಿ ನರ್ಸರಿ, ಗದಗ	20.05	7958/-	6328/-	"
	ಧಾರವಾಡ ಜಿಲ್ಲೆ (ಜಿಲ್ಲಾ ಪಂಚಾಯತ್)				
55)	ಕಣವೆ, ಹೊನ್ನಾವರ	4.20	29936/-	104017/-	ಲಾಭಾದಾಯಕ
56)	ಬಂಗೇರಿ ತೋ ಕ್ಷೇ	6.14	174267/-	75823/-	ನಷ್ಟದಾಯಕ
57)	ಶಿಗ್ಗಾವಿ ನರ್ಸರಿ	0.05	56013/-	9674/-	"
58)	ಕರ್ಜಗಿ ತೋ ಕ್ಷೇ	25.00	334672/-	206328/-	"
59)	ಹನುಮನಹಟ್ಟಿ ತೋ ಕ್ಷೇ	29.04	209160/-	50187/-	"
60)	ದಸ್ತಿಕೊಪ್ಪ ತೋ ಕ್ಷೇ	3.00	85379/-	49278/-	"
61)	ಚೌಡಯ್ಯ ದಾನಪುರ ತೋ ಕ್ಷೇ	1.24	200018/-	88594/-	"
62)	ಹಾನಗಲ್ ಕ್ಷೇತ್ರ	17.13	228380/-	13415/-	"
63)	ಹಂಸಬಾವಿ	6.14	230917/-	102624/-	"
64)	ಹಟ್ಟಿಹಳ್ಳಿ ತೋ ಕ್ಷೇ				ನಷ್ಟದಾಯಕ
65)	ಶಿರಹಟ್ಟಿ ನರ್ಸರಿ				"
66)	ನವಿಲಗುಂಡ ಕಛೇರಿ, ನರ್ಸರಿ				"
67)	ನರಗುಂದ ನರ್ಸರಿ				"
68)	ಬೆಳವಟಗಿ ತೋ ಕ್ಷೇ				"
69)	ಬ್ಯಾಲವಾಡಗಿ ತೋ ಕ್ಷೇ				"
70)	ಕೊಣನೂರು ತೋ ಕ್ಷೇ				"
71)	ರೋಣ ತೋ ಕ್ಷೇ				"

1	2	3	4	5	6
72)	ಕರ್ಜಗಿ ತೋ ಕ್ಷೇ				”
	ಕಾರವಾರ ಜಿಲ್ಲೆ (ಉಕ) (ರಾಜ್ಯ ವಲಯ)				
73)	ಕಛೇರಿ ನರ್ಸರಿ, ಕಾರವಾರ				”
74)	ತೋರೂರು ಕ್ಷೇತ್ರ				”
75)	ಬಾನೋಡು ಕ್ಷೇತ್ರ				ಲಾಭದಾಯಕ
76)	ಕಛೇರಿ ನರ್ಸರಿ, ಬಟ್ಕಳ				ನಷ್ಟದಾಯಕ
77)	ಕಛೇರಿ, ಬೆಳ್ಕೆ ಕ್ಷೇತ್ರ				ಲಾಭದಾಯಕ
78)	ಕಛೇರಿ ನರ್ಸರಿ, ಶಿರಸಿ				ನಷ್ಟದಾಯಕ
79)	ತರಕನಹಳ್ಳಿ, ಶಿರಸಿ				”
80)	ಕಛೇರಿ ನರ್ಸರಿ ಸಿದ್ಧಾಪುರ				”
81)	ಹೊಸೂರು ಕ್ಷೇತ್ರ				”
82)	ಕಛೇರಿ ನರ್ಸರಿ, ಯಲ್ಲಾಪುರ				ಲಾಭದಾಯಕ
83)	ಕಿತ್ತಲಕರಗದ್ದೆ ಕ್ಷೇತ್ರ				”
84)	ಬಾಣನಗೆರೆ ಕ್ಷೇತ್ರ				”
85)	ರಾಮನಗರ ಕ್ಷೇತ್ರ				”
	ಕಾರವಾರ (ಉಕ ಜಿಲ್ಲೆ):(ಜಿಲ್ಲಾ ಪಂಚಾಯತ್)				
86)	ಬಾಚಣಿಗೆ ಕ್ಷೇತ್ರ				”
87)	ಹಿಚ್ಚಡ ತೋ ಕ್ಷೇ, ಅಂಕೋಲ				”
88)	ಕುಮುಟ ನರ್ಸರಿ				”
89)	ಹಳಿಯಾಳ ನರ್ಸರಿ				”
90)	ಸೂಪ ನರ್ಸರಿ				”
91)	ತೋಟಗಾರಿಕೆ ಸಸ್ಯಾಗಾರ ಹೊನ್ನಾವರ				”
	ಗುಲ್ಬರ್ಗಾ ವಿಭಾಗ:				
	ಗುಲ್ಬರ್ಗಾ ಜಿಲ್ಲೆ ರಾಜ್ಯ ವಲಯ)				

1	2	3	4	5	6
1)	ಚಂದ್ರಂಪಳ್ಳಿ ಫಾರಂ	108.00	210528.00	113520.00	ನಷ್ಟದಾಯಕ
2)	ನಾರಾಯಣಪುರ ಫಾರಂ	84.00	437800.00	910565.00	ಲಾಭದಾಯಕ
3)	ಹತ್ತಿಕುಣಿ ಫಾರಂ	42.20	1690000.00	224047.00	"
4)	ಮಾಲಗತ್ತಿ ಫಾರಂ	21.10	91454.00	18012.00	ನಷ್ಟದಾಯಕ
5)	ಸೇಡಂ ಫಾರಂ	11.10	54000.00	1504.00	"
6)	ಅಂಳದ ನರ್ಸರಿ	0.03	29400.00	3983.00	"
7)	ಟವಾನ್ ಸಾಸಿ ನರ್ಸರಿ	8.00	132932.00	30764.00	"
8)	ಚಿತ್ತಾಪುರ ನರ್ಸರಿ	0.30	26800.00	2464.00	"
9)	ಯಾದಗಿರಿ ನರ್ಸರಿ	42.00	10000.00	2896.00	"
	ಜಿಲ್ಲಾ ಪಂಚಾಯತ್:-				
10)	ಗೂರೂರು ಫಾರಂ	12.22	15000.00	24420.00	ನಷ್ಟದಾಯಕ
11)	ಹಳ್ಳಿ ಸಲಗರ ಫಾರಂ	14.00	32388.00	-	"
12)	ಗೋಳಾಕಿ ಫಾರಂ	26.12	40006.00	25533.00	"
13)	ಕಛೇರಿ ಸಸ್ಯಗಾರ ಜೇವರ್ಗಿ	0.10	1000.00	-	"
14)	ಕಛೇರಿ ಸಸ್ಯಗಾರ, ಸೇಡಂ	-	1068.00	-	"
15)	ಕಛೇರಿ ಸಸ್ಯಗಾರ ಚಿಂಚೋಳಿ	1.00	-	-	"
16)	ಬಡೇಪುರ ಫಾರ	5.07	53790.00	74819.00	ಲಾಭದಾಯಕ
17)	ಕಛೇರಿ ನರ್ಸರಿ ಶಡಪುರ	0.20	960.00	7176.00	ನಷ್ಟದಾಯಕ
18)	ಕಛೇರಿ ನರ್ಸರಿ ಸೂರಪುರ	11.00	1000.00	-	"
	ರಾಯಚೂರು ಜಿಲ್ಲೆ (ರಾಜ್ಯ ವಲಯ)				
19)	ಕೇಂದ್ರ ತೆಂಗು ಸಸ್ಯಗಾರ ಮುನಿರಾಬಾದ್	10.00	7970.00	48100.00	ಲಾಭದಾಯಕ
20)	ಹಾಲೋಬ್ಲಾಕ್ ನರ್ಸರಿ	0.22	55563.00	13250.00	"
21)	ತರಬೇತಿ ಕೇಂದ್ರ ಮುನಿರಾಬಾದ್	27.00	57445.00	116796.00	"
22)	ಮುನಿರಾಬಾದ್, ತೋ ಕ್ಷೇ	4.00	20465.00	74186.00	"

1	2	3	4	5	6
23)	ಒಡ್ಡರಟ್ಟಿ ತೋ ಕ್ಷೇ	42.00	87813.00	577005.00	"
24)	ಸಿಂದನೂರು ತೋ ಕ್ಷೇ	24.11	35605.00	10130.00	ನಷ್ಟದಾಯಕ
25)	ನಿಡಶೇಷಿ ತೋ ಕ್ಷೇ	58.32	81029.00	97578.00	ಲಾಭದಾಯಕ
26)	ಕುಷ್ಟಗಿ ನರ್ಸರಿ ನಿಡಶೇಷ	0.20	-	2328.00	"
27)	ಮಾನ್ವಿ ಫಾರಂ	27.20	60005.00	63875.00	ನಷ್ಟದಾಯಕ
28)	ಲಿಂಗಸೂರ ನರ್ಸರಿ	1.10	32915.00	2094.00	"
29)	ದೇವದುರ್ಗ ನರ್ಸರಿ	0.20	2754.00	1440.00	"
30)	ರಾಯಚೂರು ನರ್ಸರಿ	2.20	80862.00	40029.00	"
31)	ತುಂಟಾಪುರ ಫಾರಂ	39.15	94744.00	107687.00	ಲಾಭದಾಯಕ
32)	ಸಿರವಾರ ಫಾರಂ	5.20	55766.00	3300.00	ನಷ್ಟದಾಯಕ
33)	ಅಶ್ರೀಶ್ವರ ಫಾರಂ	13.27	1000966.00	74288.00	"
34)	ಗಿಣಗೇರಾ ಫಾರಂ	10.34	82719.00	70244.00	"
35)	ಬಂಡಿ ಫಾರಂ	15.00	90086.00	75989.00	"
36)	ಹುಲಿಯಾಪುರ ಫಾರಂ	15.00	68116.00	78002.00	ಲಾಭದಾಯಕ
37)	ದೇವದುರ್ಗ ಪಾರಂ	9.30	76140.00	46886.00	ನಷ್ಟದಾಯಕ
	ಬಳ್ಳಾರಿ ಜಿಲ್ಲೆ (ರಾಜ್ಯ ವಲಯ)				
38)	ತೋರಣಗಲ್ ಕ್ಷೇತ್ರ	61.04	72079.00	246447.00	ಲಾಭದಾಯಕ
39)	ರಾಫಾಪುರ ಕ್ಷೇತ್ರ	199.00	84294.00	99331.00	"
40)	ಹಣಗಲಿ ಸಾಗತಿಬಸಾಪುರ ಕ್ಷೇತ್ರ	100.00	58917.00	103415.00	"
41)	ಕೊಟ್ಟೂರು ಕ್ಷೇತ್ರ	22.25	41411.00	10120.00	ನಷ್ಟದಾಯಕ
42)	ಚಿಕ್ಕಜೋಗಿಹಳ್ಳಿ ತರಬೇತಿ ಕೇಂದ್ರ	10.29	24172.00	4187.00	"
43)	ಬಿ. ಗೋಸಾಳ ಕ್ಷೇತ್ರ	20.00	53598.00	7804.00	"
44)	ಸಂಡೂರು ನರ್ಸರಿ	1.22	25497.00	14950.00	"
45)	ಹೊಸಪೇಟೆ ನರ್ಸರಿ	1.05	98508.00	94886.00	"
46)	ಕಛೇರಿ ನರ್ಸರಿ, ಬಳ್ಳಾರಿ	1.20	55354.00	20174.00	"

1	2	3	4	5	6
47)	ಹರಪನಹಳ್ಳಿ ನರ್ಸರಿ	1.20	12072.00	490.00	"
	ಜಿಲ್ಲಾ ಪಂಚಾಯತ್ (ಬಳ್ಳಾರಿ ಜಿಲ್ಲೆ)				
48)	ಕಲ್ಲಹಳ್ಳಿ ಫಾರಂ	57.20	18169.00	26377.00	ಲಾಭದಾಯಕ
49)	ದೇಶನೂರು ಫಾರಂ	36.18	63850.00	119815.00	"
50)	ಬುಕ್ಕಸಾಗರಿ ಫಾರಂ	69.00	92516.00	105720.00	"
51)	ಧರ್ಮಾಪುರ ಫಾರಂ	6.25	72098.00	38404.00	ನಷ್ಟದಾಯಕ
52)	ಆನಂದ ದೇವನಹಳ್ಳಿ	8.30	129446.00	57596.00	"
53)	ಹಡಗಲಿ ನರ್ಸರಿ	1.20	29861.00	4260.00	"
	ಬೀದರ್ ಜಿಲ್ಲೆ (ರಾಜ್ಯ ವಲಯ)				
54)	ಹಳ್ಳದ ಕೇರಿ ಫಾರಂ	37.16	220019.00	162254.00	ನಷ್ಟದಾಯಕ
55)	ಕಛೇರಿ ನರ್ಸರಿ ಬೀದರ್	1.17	29788.00	42234.00	ಲಾಭದಾಯಕ
56)	ಜಿಲ್ಲಾ ತೋಟಗಾರಿಕೆ ನರ್ಸರಿ ಬೀದರ್	2.20	19954.00	16255.00	ನಷ್ಟದಾಯಕ
57)	ಕಛೇರಿ ನರ್ಸರಿ ಹುಮ್ನಾಬಾದ್	0.20	11862.00	207.00	"
58)	ಎ.ಪಿ.ಒ. ಹುಮ್ನಾಬಾದ್	10.00	22092.00	9140.00	"
59)	ಬಸವ ವನ, ಬಸವಕಲ್ಯಾಣ	5.00	4950.00	15901.00	ಲಾಭದಾಯಕ
60)	ರೇಕುಳಗಿ ಕ್ಷೇತ್ರ	368.20	37000.00	10125.00	ನಷ್ಟದಾಯಕ
	ಬೀದರ್ ಜಿಲ್ಲೆ (ಜಿಲ್ಲಾ ಪಂಚಾಯತ್)				
61)	ಹಳ್ಳಿ ಫಾರಂ	55.00	199022.00	-	-
62)	ಎಪಿಎ ಮಹ್ಮಾಬಾದ್	2.00	3061.00	-	-
		ಒಟ್ಟು	76552800.00	4027807.00	

ವಿಭಾಗದ ಹೆಸರು	ಪೋಸ್ಟಾರ್ ಲಾಭದಾಯಕ ಫಾರಂ:ನರ್ಸರಿಗಳ ಸಂಖ್ಯೆ	ನಷ್ಟದಾಯಕ ಫಾರಂ:ನರ್ಸರಿಗಳ ಸಂಖ್ಯೆ	ಒಟ್ಟು
ಬೆಂಗಳೂರು	42	62	104
ಮೈಸೂರು	27	83	110
ಬೆಳಗಾವಿ	15	76	91
ಗುಲ್ಬರ್ಗಾ	21	41	62
ಒಟ್ಟು	105	262	367

ಇನ್ನುಳಿದ ಸಸ್ಯಗಾರಗಳು ಆರ್ಥಿಕ ಘಟಕಗಳಾಗಿರದೇ ಕೇವಲ ಕಛೇರಿಯ ಅಂಗಗಳಾಗಿರುತ್ತವೆ

ಶ್ರೀ ಬಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ನಷ್ಟ ಅನುಭವಿಸಿದ ಫಾರಂಗಳ ಸಂಖ್ಯೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಕಾರಣ ಏನು ಎನ್ನುವುದಕ್ಕೆ 5 ಅಂಶಗಳನ್ನು ಕೊಟ್ಟಿದ್ದಾರೆ. ಆದರೆ ಇದು ಯಾವುದೂ ಸರಿಯಾದಂಥ ಕಾರಣವಲ್ಲವೆಂದು ಹೇಳುತ್ತೇನೆ. ಇದೇ ನಿಜವಾದ ಕಾರಣವಾಗಿದ್ದರೆ, ಆ ತಪ್ಪಿತಸ್ಥ ಅಧಿಕಾರಿಗಳು ಮತ್ತು ತಾಂತ್ರಿಕ ಅಧಿಕಾರಿಗಳು ಯಾರು ಇದ್ದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇಲ್ಲಿ ಕೊಟ್ಟಿರುವ 397 ಫಾರಂಗಳಲ್ಲಿ 262 ಫಾರಂಗಳು ನಷ್ಟ ಅನುಭವಿಸುತ್ತಿವೆ. ನನ್ನ ಕ್ಷೇತ್ರದಲ್ಲೂ ಸಹ ಕೆಲವು ಫಾರಂಗಳು ಇವೆ. 1995-96ನೇ ಇಸವಿಯಲ್ಲಿ 766 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರಲ್ಲಿ ಆದಾಯ ಬಂದಿರತಕ್ಕಂಥದ್ದು ಕೇವಲ 403.78 ಲಕ್ಷ ರೂ.ಗಳು ಮಾತ್ರ. ಈ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಸರ್ಕಾರ ಯಾವ ರೀತಿಯಾದಂಥ ಕ್ರಮ ತೆಗೆದುಕೊಂಡಿದೆ? ಈ ತೋಟಗಾರಿಕೆ ಫಾರಂಗಳಲ್ಲಿ ರೈತರಿಗೆ ಉಪಯುಕ್ತವಾಗತಕ್ಕ ಎಂಥ ಸಸಿಗಳನ್ನು ಬೆಳೆಸಿ ಕೊಡುತ್ತಿದ್ದೀರಿ? ಉದಾಹರಣೆಗೆ ಇಐಎಸ್ ಯೋಜನೆಯಲ್ಲಿ ಕೂಡ ತೋಟಗಾರಿಕೆ ಇಲಾಖೆಗೆ ಹಣ ಬರುತ್ತಿದೆ. ತೆಂಗಿನ ಮರಗಳನ್ನು ಬೆಳೆಸಿ ರೈತರಿಗೆ ಕೊಡಬೇಕೆಂದು, ಅದನ್ನು ಬೆಳೆಸುವುದಕ್ಕೆ 6 ವರ್ಷಗಳಿಗೆ ಇಷ್ಟು ಹಣ ಎಂದು ಕೊಡಬೇಕೆಂದು, ಸರ್ಕಾರ ಒಂದು ಯೋಜನೆ ಹಾಕಿದೆ. ಆದರೆ ತೆಂಗಿನ ಗಿಡಗಳನ್ನು ತೋಟಗಾರಿಕೆ ಇಲಾಖೆಯ ಫಾರಂಗಳಲ್ಲಿ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಬೇರೆ ಎಲ್ಲಿಂದರೋ ತೆಂಗಿನ ಗಿಡಗಳನ್ನು ತಂದುಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಹಾಗಾಗಿ, ಈ ಫಾರಂಗಳಿಂದ ಯಾವುದೇ ಪ್ರಯೋಜನ ಸರ್ಕಾರಕ್ಕಾಗಲಿ, ಜನರಿಗಾಗಲಿ ಇಲ್ಲ. ಮತ್ತು ಸರ್ಕಾರದ ದುಡ್ಡು ಮಾತ್ರ ಖರ್ಚಾಗುತ್ತಿದೆಯೇ ಹೊರತು ಪ್ರಯೋಜನ ಏನೂ ಆಗುತ್ತಿಲ್ಲ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎಂಬುದನ್ನು ಮಾನ್ಯ ಸಚಿವರಿಗೆ ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ರೆಡ್ಡಿಯವರು ಕೇಳಿರತಕ್ಕಂಥ ಪ್ರಶ್ನೆಗೆ ಸಮಗ್ರವಾದಂಥ ಉತ್ತರವನ್ನು ಈಗಾಗಲೆ ನಾವು ಕೊಟ್ಟಿದ್ದೇವೆ. ಒಟ್ಟು 397 ತೋಟಗಾರಿಕೆ ಕ್ಷೇತ್ರಗಳು ಮತ್ತು ನರ್ಸರಿಗಳು ನಮ್ಮ ಇಲಾಖೆಯಲ್ಲಿಗೆ ಒಳಪಡುತ್ತವೆ. ಅದರಲ್ಲಿ 166

ಜಿಲ್ಲಾಪಂಚಾಯಿತಿ ವ್ಯಾಪ್ತಿಗೆ ಬರುತ್ತವೆ. ಮತ್ತು 231 ರಾಜ್ಯ ವಲಯ ವ್ಯಾಪ್ತಿಗೆ ಬರುತ್ತದೆ. 397 ಫಾರಂಗಳು ಏನಿವೆ ಅವು ಎಲ್ಲವೂ ಕೂಡ ಸರಿಯಿಲ್ಲ. ಯಾವ ಯಾವುದೋ ಖಾಲಿ, ವೇಸ್ಟ್ ಲ್ಯಾಂಡ್ ಎಂದು ನಾವು ಏನು ಹೇಳುತ್ತೇವೋ ಆ ಲ್ಯಾಂಡನ್ನು ನಾವು ಒತ್ತುವರಿ ಮಾಡಿಕೊಂಡು, ಅದನ್ನು ತೋಟಗಾರಿಕೆ ಇಲಾಖೆಯಲ್ಲಿ ಉಪಯೋಗ ಮಾಡಿದ್ದೇವೆಯೇ ಹೊರತು ಎಲ್ಲಾ ಕಡೆ ಉತ್ಕೃಷ್ಟವಾಗಿರುವಂಥ ಜಮೀನು ಇಲ್ಲ. ಕೆಲವು ಕಡೆ ಮಾತ್ರ ಉತ್ಕೃಷ್ಟವಾದ ಜಮೀನು ಇದೆ ಹೆಚ್ಚು ಪಾಲು ಉತ್ಕೃಷ್ಟ ಭೂಮಿ ಇಲ್ಲ. ಇನ್ನು ಕೆಲವು ಕಡೆ ಒಣಭೂಮಿ ಎಂದು ಹೇಳಬಹುದು, ಅಲ್ಲಿ ನೀರು ಸಿಗುವುದಿಲ್ಲ, ಮಣ್ಣು ಸರಿಯಿಲ್ಲ, ಅಲ್ಲಿ ಯಾವುದೇ ರೀತಿಯ ಬೆಳೆಗಳನ್ನು ಬೆಳೆಯಲಾರದಂಥ ಪರಿಸ್ಥಿತಿ ಇದೆ; ಅಂಥದ್ದರಲ್ಲೂ ಕೂಡ ಬೆಳೆಗಳನ್ನು ಬೆಳೆಯಲಿಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ನೀವು ಹೇಳಿದ ಹಾಗೆ ಕೆಲವು ಲೋಪದೋಷಗಳು ಇವೆ ಅದೇನೆಂದರೆ ನಾವು ಏನು ಹಣ ಬಿಡುಗಡೆ ಮಾಡಿರುತ್ತೇವೆ, ಹಾಗೆ ಬಿಡುಗಡೆಯಾದ ಹಣ ಸರಿಯಾಗಿ ಖರ್ಚಾಗದೆ ಇರಬಹುದು, 1995-96ನೇ ಸಾಲಿನಲ್ಲಿ ಸುಮಾರು 97 ಕೋಟಿ 66 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಅಧ್ಯಕ್ಷರು:- ಈಗ ಫಾರ್ಮ್ಸ್ ಮಾಡುವಂತಹ ಉದ್ದೇಶವೇನು?

ಡಿ.ಟಿ.ಜಯಕುಮಾರ್:-ಮಾನ್ಯ ಅಧ್ಯಕ್ಷರೆ, ಅದು ನಮ್ಮ ಎಕ್ಸ್‌ಟೇನ್ಷನ್ ವರ್ಕ್. ಯಾವುದೇ ತೋಟಗಾರಿಕೆ ಬೆಳೆಗಳ ವಿಸ್ತೀರ್ಣವನ್ನು ಹೆಚ್ಚಿಗೆ ಮಾಡತಕ್ಕಂಥದ್ದು, ತೋಟಗಾರಿಕೆ ಬೆಳೆಗಳನ್ನು ಹೆಚ್ಚು ಹೆಚ್ಚು ಬೆಳೆದು ರೈತ ಅದರಿಂದ ಆರ್ಥಿಕ ಲಾಭವನ್ನು ಪಡೆದು ತನ್ನ ಜೀವನವನ್ನು ಉತ್ತಮಪಡಿಸಿಕೊಳ್ಳುವಂಥದ್ದು. ಮತ್ತು ಹಣ್ಣು ಹಂಪಲುಗಳು, ಪೌಷ್ಟಿಕ ಆಹಾರಾಂಶಗಳು ರೈತರಿಗೆ ಮತ್ತು ಶ್ರೀಸಾಮಾನ್ಯನಿಗೆ ಸಿಕ್ಕಿ, ಅವರಿಗೆ ಪೌಷ್ಟಿಕ ಆಹಾರಾಂಶಗಳನ್ನು ಒದಗಿಸುವುದು ನಮ್ಮ ತೋಟಗಾರಿಕೆ ಇಲಾಖೆಯ ಉದ್ದೇಶ. ಅದಕ್ಕೆ ಮಾವಿನ ಸಸಿಗಳು ಬಾಳೆ ಸಸಿಗಳು ಇವುಗಳನ್ನು ಅಭಿವೃದ್ಧಿ ಮಾಡುತ್ತೇವೆ ಆದರೆ ಲೋಪದೋಷ ಎಲ್ಲಿ ಇದೆ ಎಂದರೆ, 1995-96ನೇ ಸಾಲಿನಲ್ಲಿ 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಮಗೆ ಬಂದಿರತಕ್ಕಂಥದ್ದು ಕೇವಲ 4 ಕೋಟಿ 3 ಲಕ್ಷ 78 ಸಾವಿರ ಇದಕ್ಕೆ ಮುಖ್ಯ ಕಾರಣ ನಮ್ಮ ಜಮೀನುಗಳು ಉತ್ಕೃಷ್ಟವಾಗಿಲ್ಲ ಎನ್ನುವ ಒಂದು ಮಾತನ್ನು ಹೇಳಿದೆ. ಮತ್ತೆ ಸಿಬ್ಬಂದಿ ಕೊರತೆ 350 ಎಕರೆ ಜಮೀನು ಇರತಕ್ಕಂತಹ ಕಡೆ ಅಲ್ಲಿರತಕ್ಕಂತಹ ಕೆಲಸಗಾರರು ಕೇವಲ 9 ಜನ. ಸರಿ ಸಮಾನವಾಗಿ ಇಲ್ಲದೇ ಇರತಕ್ಕಂಥದ್ದು. ಮತ್ತೆ ಅವರು ಹೇಳಿದಂತಹ ಹಣವನ್ನು ನಾವು ಬಿಡುಗಡೆ ಮಾಡದೇ ಇರತಕ್ಕಂಥದ್ದು. ಜೊತೆಗೆ ಇನ್ನೊಂದು ಉತ್ತರದಲ್ಲಿ ತಿಳಿಸದೇ ಇರತಕ್ಕಂಥದ್ದು ಎಂದರೆ ಸಬ್ಸಿಡಿ ರೇಟಿನಲ್ಲಿ ಮಾವಿನ ಗಿಡ, ಉದಾಹರಣೆಗೆ ಹೊರಗಡೆ 30 ರಿಂದ 50 ರೂಪಾಯಿಗಳಾಗುತ್ತದೆ. ಮಲ್ಲಿಕಾ ಒಳ್ಳೆಯ ಗಿಡವನ್ನು ತೆಗೆದುಕೊಳ್ಳಬೇಕಾದರೆ 40 ರೂಪಾಯಿಗಳಾಗುತ್ತದೆ. ಆದರೆ ನಾವು ಏನು ಮಾಡುತ್ತೇವೆಂದರೆ, 30 ರೂಪಾಯಿಗಳನ್ನು ಖರ್ಚು ಮಾಡಿ 15 ರೂಪಾಯಿಗಳಿಗೆ ಸಬ್ಸಿಡಿ ರೇಟಿನಲ್ಲಿ ಕೊಡುತ್ತೇವೆ. ಇದೊಂದು ಕಾರಣ ನಾವು ಹೆಚ್ಚು ನಷ್ಟವನ್ನು ಹೊಂದುವುದಕ್ಕೆ. ಇದು ಎಕ್ಸ್‌ಟೆನೆಷನ್ ವರ್ಕ್ ಆಗಿರುವುದರಿಂದ ಪ್ರಮೋಟ್ ವರ್ಕ್‌ನಲ್ಲಿ ಸ್ವಲ್ಪ ನಷ್ಟವಾಗುತ್ತದೆ. ಕೆಲವು

ಅಧಿಕಾರಿಗಳು ಕೂಡ ನೀವು ಹೇಳಿದ ಹಾಗೆ ಇದ್ದಾರೆ. ಟಿ.ವಿ.ಯಲ್ಲಿ ಬಾವಿ ಕಳುವಾಗಿದೆ ಎಂದು ಒಂದು ಎಪಿಸೋಡ್ ಬಂದಿದ್ದನ್ನು ತಾವು ನೋಡಿರಬಹುದೆಂದು ಕಾಣುತ್ತದೆ. ಅದೇ ರೀತಿ ನಮ್ಮ ಇಲಾಖೆಯಲ್ಲಿ ಬೀದರ ಫಾರ್ಮ್‌ಗೆ ಹೋಗಿ ನೋಡಿದಂತಹ ಸಂದರ್ಭದಲ್ಲಿ ಒಬ್ಬ ಅಧಿಕಾರಿಗಳು ಆರೂವರೆ ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಅಲ್ಲಿ ಹೋಗಿ ನೋಡಿದರೆ ಬಾವಿಯೂ ಇಲ್ಲ, ಪಂಪ್‌ಸೆಟ್ ಇಲ್ಲ, ನೀರು ಇಲ್ಲ.

ಅಧ್ಯಕ್ಷರು: ಇನ್ನೆಲ್ಲಿಗೋ ಹೋಗಿರಬಹುದು.

ಶ್ರೀ ಡಿ.ಟಿ.ಜಯಕುಮಾರ್: ಅವರ ಮೇಲೆ ಆಕ್ಷನ್ ತೆಗೆದುಕೊಂಡಿದ್ದೇವೆ. ಆ ಅಧಿಕಾರಿಯನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದೇವೆ. ಅವರ ಮೇಲೆ ಎನ್‌ಕ್ವೇರಿ ಮಾಡುತ್ತಿದ್ದೇವೆ.

ಶ್ರೀ ಡಿ. ಜಯಕುಮಾರ್: ಎಪಿಸೋಡ್‌ನಲ್ಲಿ ಅದನ್ನೇ ಹೇಳುವುದು. ಆ ರೀತಿಯಾದಂತಹ ಕೆಲವು ಲೋಪದೋಷಗಳಿವೆ. ಅವರ ಮೇಲೆ ಸೂಕ್ತವಾದಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಜೊತೆಗೆ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ ನಾವು ಅಧಿಕಾರಕ್ಕೆ ಬಂದ ಮೇಲೆ ಪ್ರಮೋಶನೆಟ್ ಆಗಿ ಆದಾಯ ಹೆಚ್ಚಾಗಿದೆ. ನನ್ನ 8 ತಿಂಗಳ ಕಾಲಾವಧಿಯಲ್ಲಿ 48ಲಕ್ಷ ರೂಪಾಯಿಗಳ ಆದಾಯ ಹೆಚ್ಚು ಬಂದಿದೆ. ಇನ್ನು 3 ತಿಂಗಳಿನಲ್ಲಿ ಮಾವಿನ ಫಸಲನ್ನು ಹರಾಜು ಹಾಕಿದರೆ, ಒಂದೂವರೆ ಕೋಟಿ ರೂಪಾಯಿಗಳು ಲಾಭ ಬರತಕ್ಕಂತಹ ಅವಕಾಶ ಈ ಸಾಲಿನಲ್ಲಿ ಬರುತ್ತಿದೆ. ಮಾರ್ಚ್ ಕೊನೆಯಲ್ಲಿ ಲೆಕ್ಕವನ್ನು ಕೊಟ್ಟರೆ ಒಂದುವರೆ ಕೋಟಿ ರೂಪಾಯಿಗಳು ಲಾಭ ಬರತಕ್ಕಂತದ್ದು ಇದೆ. ಪ್ರಮೋಶ್ಯನೇಟ್ ಆಗಿ ಇನ್‌ಕ್ರೀಜ್ ಮಾಡಿದ್ದೇನೆ. ಆದರೆ ಇದ್ದಂತಹ ಸಮಸ್ಯೆಗಳಿಗೆ ಕೆಲವು ಅಡಚಣೆಗಳಿವೆ.

ಶ್ರೀ ಜಿ.ಎ. ರಾಮರೆಡ್ಡಿ: ವಾಸ್ತವವಾಗಿ ಹಳ್ಳಿಗಾಡಿನಲ್ಲಿರತಕ್ಕಂತಹ ರೈತರಿಗೆ ತೊಂದರೆಯಾಗುತ್ತಿದೆ. ಯಾವ್ಯಾವ ಗಿಡಗಳನ್ನು ಹಾಕಿ ಬೆಳೆಯುತ್ತಾರೆ. ಅದು ಉಪಯುಕ್ತವಾದಂಥದ್ದು ಯಾವ್ಯಾವ ಪ್ರದೇಶಕ್ಕೆ ಉಪಯುಕ್ತವಾದಂತಹ ಸಸಿಗಳು ಯಾವುದು ಇರುತ್ತದೆ, ಅಂಥವುಗಳನ್ನು ಹಾಕುವಂತಹ ಪ್ರಯತ್ನವನ್ನು ಮೊದಲನೆಯದಾಗಿ ಮಾಡಬೇಕು. ಎರಡನೆಯದಾಗಿ ನಷ್ಟವನ್ನು ಅನುಭವಿಸುವುದಕ್ಕೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಗಳು ಒಂದು ಭಾಗವಾದರೆ, ಅಲ್ಲಿ ಬೇರೆ ಬೇರೆ ಕಾರಣಗಳು ಇವೆ. ತೋಟವನ್ನು ನೋಡಿಕೊಳ್ಳುವುದಕ್ಕೆ ಜನ ಇಟ್ಟು ಸಂಬಳವನ್ನು ಕೊಡುತ್ತೇವೆಂದು ಹೇಳಿದ್ದೀರಿ, ಆದರೆ ಒಬ್ಬರೂ ಸಹ ಆ ತೋಟದ ಬಳಿ ಇರುವುದಿಲ್ಲ ರಾತ್ರಿ ಮತ್ತು ಹಗಲು ವೇಳೆಯಲ್ಲಿಯೂ ಇರುವುದಿಲ್ಲ. ಹಾಗಾಗಿ ಇನ್ನೂ ಹೆಚ್ಚು ನಷ್ಟವಾಗತಕ್ಕಂತಹ ಪರಿಸ್ಥಿತಿ ಇದೆ ಇದಕ್ಕೆ ಸರಿಯಾದ ಕ್ರಮವನ್ನು ತೆಗೆದುಕೊಂಡು ರೈತರಿಗೆ ಉಪಯೋಗವಾಗುವಂತಹ ಸಸಿಗಳನ್ನು ಬೆಳೆದುಕೊಡುವುದಕ್ಕೆ ಪ್ರಯತ್ನವನ್ನು ಮಾಡಬೇಕು.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಕೆಳಮಟ್ಟದಿಂದ ಪ್ರಮೋಷನ್ ಆಗಿ ಮೇಲಟ್ಟಕ್ಕೆ ಹೊರಟು ಹೋಗಿದ್ದಾರೆ. ಕೆಳಗಡೆ ಗಾರ್ಡನರ್ ಮತ್ತೆ ಹೆಚ್. ಇ. ಗಳಾಗಿ ತೋಟಗಾರಿಕೆಯಲ್ಲಿ ಏನು ಕೆಲಸವನ್ನು ಮಾಡುತ್ತಿದ್ದರೋ ಅವರೆಲ್ಲರೂ ಕೂಡ ಪ್ರಮೋಷನ್ ಆಗಿ ಮೇಲ್ಗಡೆ ಹೋಗಿರುವುದರಿಂದ ಕೆಳಗಡೆ ಕೆಲಸ ಮಾಡುವವರು ಸ್ವಲ್ಪ

ಕಡಿಮೆಯಾಗಿದೆ. ಅದಕ್ಕೆ ಈಗಾಗಲೇ ನಾವು ಸರ್ಕಾರಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ಒದಗಿಸುವುದಕ್ಕೆ ವಿನಂತಿಯನ್ನು ಮಾಡಿಕೊಂಡಿದ್ದೇವೆ ಸಿಬ್ಬಂದಿ ಒದಗಿಸಿದ ಮೇಲೆ ಹೆಚ್ಚಿನ ಆಸ್ತಿ ವಹಿಸುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಬೆಳೆಗಳ ಬಗ್ಗೆ ರೈತರಿಗೆ ಉಪಯುಕ್ತವಾದಂತಹ ಬೆಳೆಗಳನ್ನೇ ಒದಗಿಸುತ್ತಿದ್ದೇವೆ ಉದಾಹರಣೆಗೆ ಕೋಲಾರದಲ್ಲಿ ಮಾವಿನ ಸಸಿಗಳನ್ನು ಉತ್ಪತ್ತಿ ಮಾಡುತ್ತಿದ್ದೇವೆ ಬಿಜಾಪುರಕ್ಕೆ ಹೋದರೆ ದ್ರಾಕ್ಷಿ, ಮತ್ತೆ ಹಾಸನಕ್ಕೆ ಬಂದರೆ ಆಲುಗೆಡ್ಡೆ, ಈ ರೀತಿಯಾಗಿ ಸ್ಥಳೀಕವಾಗಿ ಆಯಾಯ ಜಿಲ್ಲೆಗೆ ಅನುಗುಣವಾಗಿ ಹೆಚ್ಚು ಒತ್ತನ್ನು ಕೊಟ್ಟು ರೈತರಿಗೆ ಸಹಾಯಧನದಲ್ಲಿ ಹೆಚ್ಚು ಗಿಡಗಳನ್ನು ಹಂಚತಕ್ಕಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಚೆನ್ನಾಗಿ ನಡೆಯುತ್ತಿದೆ, ಲೋಪದೋಷಗಳನ್ನು ತಾವು ತಿಳಿಸಿದರೆ, ಅವರ ಮೇಲೆ ಕ್ರಮವನ್ನು ತೆಗೆದುಕೊಂಡು ಏನು ಆಕ್ಷನ್ ಬೇಕಾದರೂ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ: ಸನ್ಮಾನ್ಯ ಧ್ಯಕ್ಷರೆ, ತೋಟಗಾರಿಕೆ ಇಲಾಖೆಯವರು ಈ ರಾಜ್ಯದಲ್ಲಿ ಇನ್ನೇನು ಮಾಡುವುದು ಬೇಕಾಗಿಲ್ಲ. ಸಧ್ಯದಲ್ಲಿ ಮಳೆ ಆಧಾರಿತ ಪ್ರದೇಶದ ರೈತರಿಗೆ ಸ್ವತಂತ್ರ್ಯ ಬಂದು 50 ವರ್ಷವಾದರೂ ಪುಕ್ಕಟೆಯಾಗಿ ಒಂದು ಮಾವಿನ ಸಸಿಯನ್ನು ಕೊಟ್ಟಿಲ್ಲ. ಪುಕ್ಕಟೆಯಾಗಿ ಒಂದು ಮಾವಿನ ಸಸಿಯನ್ನು ಕೊಡುವುದಕ್ಕೆ ಆ ಡ್ರಾಫ್ಟಿಂಗ್ ಮಾಡುವುದಕ್ಕೆ ಏನು ಅನಾನುಕೂಲವಾಗಿದೆ ಎಂದು ಗೊತ್ತಾಗುತ್ತಿಲ್ಲ. ಅಲ್ಫೈನ್ಸಾ, ಮಲ್ಲಿಕಾ, ಇನ್ನು ಇತರೆ ಹಣ್ಣಿನ ಗಿಡಗಳು ಅದರಲ್ಲಿಯೂ ವಿಶೇಷವಾಗಿ ನಾರ್ತ್ ಕರ್ನಾಟಕದಲ್ಲಿ, ನಾರ್ತ್ ಕರ್ನಾಟಕದಲ್ಲಿ ಬಹಳವಾಗಿ ಮಾವಿನ ಹಣ್ಣುಗಳನ್ನು ಬೆಳೆಯುತ್ತಾರೆ. ವಿಶೇಷವಾಗಿ ಬೆಂಗಳೂರು ಜಿಲ್ಲೆಯಲ್ಲಿ ಮಾವಿನ ಹಣ್ಣನ್ನು ಉತ್ಪಾದನೆ ಮಾಡುತ್ತಾರೆ. ಒಂದು ಉತ್ತಮವಾದಂತಹ ಮಾರುಕಟ್ಟೆಯನ್ನು ಕೊಟ್ಟು, ಕನಿಷ್ಟ ಎಷ್ಟು ಮಾವಿನ ಸಸಿಗಳನ್ನು ನೆಡುವುದಕ್ಕೆ ಸಾಧ್ಯವಿದೆ ಅಷ್ಟು ಉತ್ಪಾದನೆ ಮಾಡಿ. ಆ ಡ್ರೈ ಏರಿಯಾ ಡವೆಲಪ್‌ಮೆಂಟ್ ಬೋರ್ಡ್ ಎಲ್ಲವನ್ನು ಸ್ಕ್ವಾಷ್ ಮಾಡಿ, ಹಣ್ಣಿನ ಗಿಡಗಳನ್ನು ಕೊಡುವುದರ ಮೂಲಕ ರೈತರನ್ನು ಇನ್‌ವಾಲ್ವ ಮಾಡಿದರೆ, ಈ ರಾಜ್ಯದಲ್ಲಿ ಹೆಚ್ಚು ಉತ್ಪಾದನೆಯಾಗುತ್ತದೆ., ಬಹಳ ಕ್ರಾಂತಿಯನ್ನು ಮಾಡಿದ ಹಾಗೆ ಆಗುತ್ತದೆ. ಆದರೆ ತೋಟಗಾರಿಕೆ ಇಲಾಖೆ ಏನು ಮಾಡುತ್ತಿಲ್ಲ ಕೆ.ಆರ್. ಪೇಟೆಯ ಬಳಿ ಒಂದು ಫಾರ್ಮ್ ಇದೆ, ಅಲ್ಲಿ 400-500 ಸಸಿಗಳನ್ನು ಒಂದು ತಾಲ್ಲೂಕಿಗೆ ಕೊಡುತ್ತಾರೆ ಅದರಲ್ಲಿ ಏನು ಮಾಡುವುದಕ್ಕೆ ಸಾಧ್ಯ? ಇಸ್ರೇಲ್‌ಗೆ ಹೋಗಿ ಎಲ್ಲ ನೋಡಿಕೊಂಡು ಬಂದಿದ್ದೀರಿ. ಇಸ್ರೇಲ್ ಹಿಂದೆ ಮರುಳುಗಾಡಾಗಿದ್ದು ಇವತ್ತು ನಂದನ ವನವಾಗಿದೆ. ನಂದನವನವಾಗಿರುವುದನ್ನು ಮರಳುಗಾಡೆಂದು ಆಗುವಂತಹ ಸ್ಥಿತಿಗೆ ತರಬೇಡಿ. ನಿಜವಾಗಿಯೂ ಹಸಿರು ಕ್ರಾಂತಿಯನ್ನು ಮಾಡಬೇಕು ಎಂದರೆ, ಕನಿಷ್ಟ ಮಾವಿನ ಸಸಿಗಳನ್ನು ಕೊಡಿ. ನಾನು ರೋಮ್‌ಗೆ ಹೋಗಿದ್ದೆ, ಅಲ್ಲಿ ನಮ್ಮ ಒಂದು ಕೆ.ಜಿ ಮಾವಿನ ಹಣ್ಣಿಗೆ 213 ರೂಪಾಯಿಗಳು. ಒಂದು ಎಕರೆ ಪ್ರದೇಶದಲ್ಲಿ 40 ಸಸಿಗಳನ್ನು ನೆಡಬಹುದು. 40 ಮಾವಿನ ಸಸಿಗಳನ್ನು ನೆಟ್ಟರೆ, ಕನಿಷ್ಟ 100 ಕೆ.ಜಿ ಯಾದರೂ.....

ಅಧ್ಯಕ್ಷರು: ಈ ರಾಜ್ಯದಲ್ಲಿ ಅತ್ಯಂತ ಹೆಚ್ಚು ಮಾವನ್ನು ನಮ್ಮ ಭಾಗದಲ್ಲಿ, ನನ್ನ ಕ್ಷೇತ್ರದಲ್ಲಿ ಬೆಳೆಯುವಂಥದ್ದು .

ಶ್ರೀ ಕೆ.ಎನ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಅದು ಯಾವ್ಯಾವ ತರಹದ ಮಾವಿನ ಸಸಿ ಎಂದು ದಯವಿಟ್ಟು ನಾನು ಕುಳಿತು ಕೊಂಡ ಮೇಲೆ ತಾವು ಒಂದು ಮಾತನ್ನು ಹೇಳಿದರೆ ಒಳ್ಳೆಯದು.

ಅಧ್ಯಕ್ಷರು: ಈ ಸಾರಿ ಸೀಜನ್‌ಲ್ಲಿ ತರಿಸುತ್ತೇನೆ ಬನ್ನಿ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ: ಆದುದರಿಂದ, ಮಾವಿನ ಸಸಿಗಳನ್ನು ಕೊಡತಕ್ಕಂತಹ ಕೆಲಸವನ್ನು ಮಾಡಿ, ಅದು ಬಹಳ ಉತ್ತಮವಾದಂತಹ ಕೆಲಸ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್: ಸೀಜನ್‌ನಲ್ಲಿ ತರಿಸಿದಾಗ, ಪ್ರಶ್ನೆಯನ್ನು ಕೇಳಿದ ಅವರೊಬ್ಬರಿಗೆ ಕೊಡುತ್ತೀರೋ ಎಲ್ಲರಿಗೂ ಕೊಡುತ್ತೀರೋ?

ಅಧ್ಯಕ್ಷರು: ನಿಮ್ಮ ಟೂರಿಸ್ಟ್ ರೂಂ ಕೊಡುವುದಿಲ್ಲ, ನಿಮಗೆಲ್ಲಾ ಹೇಗೆ ಕೊಡುತ್ತಾರೆ?

ಶ್ರೀ ಡಿ.ಟಿ. ಜಯಕುಮಾರ್: ಈ ಸಾರಿ ಬಜೆಟ್‌ನಲ್ಲಿ ಉತ್ತಮವಾದ ಮೂರು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ತೋಟಗಾರಿಕೆಯ ಅಂದೋಳವನ್ನು ಕರ್ನಾಟಕದಲ್ಲಿ ಹೆಚ್ಚು ಮಾಡುವ ಮತ್ತು ಕೃಷಿ ನೀತಿಯಲ್ಲಿ ಈಗಾಗಲೇ ಕೃಷಿ ಸಚಿವರು ಬೈರೇಗೌಡರು ಹೇಳಿದ್ದಾರೆ.

ಅಧ್ಯಕ್ಷರು: ಈಗ ಪ್ರಶ್ನೆಗೆ ಉತ್ತರವನ್ನು ಹೇಳುವುದು ಅಲ್ಲ. ನಿಮಗೆ ದಾರಾಳವಾಗಿ ಸಹಾಯವನ್ನು ಮಾಡತಕ್ಕಂತಹ ಒಬ್ಬ ಮುಖ್ಯ-ಮಂತ್ರಿಗಳಿದ್ದಾರೆ. ನೀವು ಎಲ್ಲಾ ಚಿಕ್ಕ ವಯಸ್ಸಿನವರು ತೋಟಗಾರಿಕೆ ಇಲಾಖೆಯು ಬಹಳ ಪ್ರಮುಖವಾದಂತಹ ಇಲಾಖೆ. ಬಹು ಭಾಗ ಜನರ ಜೀವನಾಡಿ ಇದು. ಇದನ್ನು ನೀವು ವ್ಯವಸ್ಥಿತವಾಗಿ ಶ್ರದ್ಧೆಯಿಂದ ಆರ್ಗನೈಜ್ ಮಾಡಿದರೆ, ಅನೇಕ ಜನರಿಗೆ ಜೀವನೋಪಯವನ್ನು ಮಾಡಿಸಬಹುದು. ಇವತ್ತು ನಮ್ಮವರಿಗೆ ಏನು ಬೆಳೆಯಬೇಕೆಂದು ಗೊತ್ತಿಲ್ಲ. ಬೆಳೆದದ್ದನ್ನು ಯಾವ ರೀತಿಯಲ್ಲಿ ಮಾರಬೇಕೆಂದು ಗೊತ್ತಿಲ್ಲ. ನಿಮ್ಮ ಇಲಾಖೆಯವರು ಏನೋ ಪಾಪ ಒಂದು ಇಲಾಖೆ ಎಂದು ಇಟ್ಟುಕೊಂಡಿದ್ದಾರೆ., ಅಷ್ಟೇ. ಅವರಿಗೂ ಜನರಿಗೂ ಸಂಬಂಧ ಇಲ್ಲ. ಜನರಿಗೆ ಸಂಬಂಧ ಬರುವ ಹಾಗೆ ನಿಮ್ ಇಲಾಖೆಯನ್ನು ನಡೆಸಿಕೊಂಡು ಹೋದರೆ ನಿಮಗೆ ಹೆಚ್ಚು ಗೌರವ ಬರುತ್ತದೆ, ಮಾನ್ಯ ಮುಖ್ಯ ಮಂತ್ರಿಗಳು ಸಹಾಯವನ್ನು ಮಾಡುತ್ತಾರೆ., ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಜನ ನಿಮ್ಮನ್ನು ನೆನಪು ಮಾಡಿಕೊಳ್ಳುತ್ತಾರೆ. ಇವತ್ತು ಪಪ್ಪಾಯಿ ಎಷ್ಟೊಂದು ವಿಧವಾಗಿ ಬಂದಿದೆ ಪಪ್ಪಾಯಿಗೆ ಎಷ್ಟೊಂದು ಬೇಡಿಕೆ ಇದೆ. ಅವರು ಬೆಳೆದು ಎಲ್ಲಿ ಕೊಡಬೇಕು ಎನ್ನುವುದು ಗೊತ್ತಿಲ್ಲ. ನಮ್ಮಲ್ಲಿ ಎಲ್ಲ ವಾಟರ್ ಮೆಲ್ಲನ್ ಪಾಪ ರೈತರು ಎಲ್ಲರೂ ಬೆಳೆದು ಬಿಡುತ್ತಾರೆ ಫುಟ್ ಬಾತ್‌ನಲ್ಲಿಟ್ಟುಕೊಂಡು ಮಾರುತ್ತಾರೆ. ಹಾಫ್ ಕಾಮ್ಸ್ ತೆಗೆದುಕೊಂಡು ಹೋಗಬೇಕು ಹಾಫ್ ಕಾಮ್ಸ್‌ನಲ್ಲಿ ಒಂದು ಲಿಮಿಟ್ ಇರುತ್ತದೆ ಅದರ ಮೇಲೆ ಏನು ಮಾಡಬೇಕು? ಎಲ್ಲಾ ಹಣ್ಣುಗಳು ಕೂಡ ಹಾಗೆಯೇ ಆಗುತ್ತದೆ. ಪಾಪ ರೈತರ ಜೀವನದ ಸ್ಥಿತಿಯನ್ನು ಆಲೋಚನೆಯನ್ನು ಮಾಡಿಕೊಂಡು ಅದಕ್ಕೆ ಹೊಂದಿಕೊಂಡು ನಿಮ್ಮ ಇಲಾಖೆ ಕೆಲಸ ಮಾಡಬೇಕು ಎನ್ನುವುದು ಎಲ್ಲರ ಅಪೇಕ್ಷೆ.

ಶ್ರೀ ಬಿ.ಬಿ. ಶಿವಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ 4 ಇಲಾಖೆಗಳ ಪಟ್ಟಿ ಇದೆ. ಹಾಲೂರಿನಲ್ಲಿ 2 ಲಕ್ಷ 71 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ 5,000 ರೂಪಾಯಿಗಳು ಉತ್ಪತ್ತಿ ಇದೆ. ಮತ್ತೊಂದು ಬಾಗೇನಲ್ಲಿ 3 ಲಕ್ಷ 94 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ, 1,114 ರೂಪಾಯಿಗಳ ಉತ್ಪತ್ತಿ ಇದೆ. ಇಲ್ಲಿ ಏಲಕ್ಕಿ ಗಿಡಗಳನ್ನು ಬೆಳೆದು ಒಂದು ವರ್ಷ ಮುಫತ್ತಾಗಿ ಕೊಟ್ಟರು, ಮತ್ತೊಂದು ಸಾರಿ 1 ರೂಪಾಯಿಗಳನ್ನು ಮಾಡಿ, ಏಕಾಏಕಿ 4 ರೂಪಾಯಿಗಳಿಗೆ ಹೆಚ್ಚಿಸಿ ಬಿಟ್ಟರು. ಏಲಕ್ಕಿ ಗಿಡವನ್ನು ಬೇರೆಯವರು ಕೂಡ ನರ್ಸರಿಯನ್ನು ಮಾಡುತ್ತಾರೆ. ನಾನು ಒಂದು ಸಾರಿ ಕೆ.ಡಿ.ಪಿ.ಮೀಟಿಂಗ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪವನ್ನು ಮಾಡಿ ಮಂತ್ರಿಗಳಿಗೆ ಪತ್ರವನ್ನು ಕೂಡ ಬರೆದಿರುತ್ತೇನೆ. ಆದರೆ ಅದು ತಲುಪಿದೆಯೋ ಏನೋ ಗೊತ್ತಿಲ್ಲ. ರೇಟನ್ನು ಸ್ವಲ್ಪ ಕಡಿಮೆ ಮಾಡಿ ಎಂದು, ರೇಟ್ ಕಡಿಮೆಯಾಗಲಿಲ್ಲ. ಬೆಳೆದಂತಹ ಲಕ್ಷಾಂತರ ಗಿಡ ಯಾರು ತೆಗೆದುಕೊಳ್ಳದೆ ಹಾಳಾಗಿ ಹೋಯಿತು. ಹೀಗಾಗಿ ಈ ರೀತಿಯ ನಷ್ಟಗಳು ಕೂಡ ಆಗುತ್ತಿದೆ. ಅವಶ್ಯಕತೆ ಇರುವ ಕಡೆ ಗಿಡಗಳನ್ನು ಯಾವ ಸಮಯದಲ್ಲಿ ಕೊಡಬೇಕೋ ಆ ಸಮಯದಲ್ಲಿಯೇ ಕೊಡಬೇಕು. ಯಾವುದೋ ಸಮಯದಲ್ಲಿ ಕೊಟ್ಟರೆ ಆಗುವುದಿಲ್ಲ. ಇದನ್ನು ಸ್ವಲ್ಪ ಸರಿ ಮಾಡಿದರೆ ಸ್ವಲ್ಪ ಲಾಭ ಬರುತ್ತದೆ.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಲೋಪದೋಷ ಆಗಿದೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ವಿವರ ತರಿಸಿ ಏನು ಲೋಪದೋಷ ಆಗಿದೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಜೊತೆಗೆ ಉತ್ತಮವಾದಂಥ ಸಲಹೆಯನ್ನು ತಾವು ನಮ್ಮ ಇಲಾಖೆಗೆ ನೀಡಿದ್ದೀರಿ. ಅದೆಲ್ಲವನ್ನೂ ಪರಿಗಣಿಸಿ ಮುಂದಿನ ಆಯವ್ಯಯದಲ್ಲಿ ಮೂರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇನೆ ತೋಟಗಾರಿಕೆ ಅಂದೋಳನವನ್ನು ಮಾಡಲಿಕ್ಕೆ...

ಅಧ್ಯಕ್ಷರು: ತಾವು ಬೈರೇಗೌಡರ ಜೊತೆ ಮಾತನಾಡಿ. ಅಪಾರವಾದ ಐಡಿಯಾಗಳು ಅವರಲ್ಲೂ ಇವೆ. ಅವರ ಜೊತೆ ಚರ್ಚೆ ಮಾಡಿ.

ಶ್ರೀ ಡಿ.ಟಿ. ಜಯಕುಮಾರ್: ಅವರ ಜೊತೆ ಚರ್ಚೆ ಮಾಡಿ ಒಂದು ಉತ್ತಮವಾದ ಕಾರ್ಯಕ್ರಮವನ್ನು ಈ ಬಜೆಟ್ ಅಧಿವೇಶನದಲ್ಲಿ ಇಡುತ್ತಿದ್ದೇವೆ. ಮತ್ತು ಕೆ.ಎಚ್.ಎಫ್. ಬಗ್ಗೆಯೂ ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಹೊಸ ಕೃಷಿ ನೀತಿಯ ಅನುಸಾರವಾಗಿ ನನ್ನ ಅಧ್ಯಕ್ಷತೆಯಲ್ಲಿ ಸಚಿವಸಂಪುಟ ಉಪಸಮಿತಿ ಒಂದು ರಚನೆಯಾಗಿದೆ. ಅದರಲ್ಲಿ ಈಗಾಗಲೇ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ ನಮ್ಮ ರಾಜ್ಯದಲ್ಲಿರತಕ್ಕ ತೋಟಗಾರಿಕಾ ಬೆಳೆಗಳ ವಿಸ್ತೀರ್ಣ ಏನಿದೆ ಇದನ್ನು ನೂರಕ್ಕೆ ನೂರರಷ್ಟು ಹೆಚ್ಚಿಗೆ ಮಾಡಬೇಕೆಂಬ ತೀರ್ಮಾನವನ್ನು ಮಾಡಿದ್ದೇವೆ. ಅದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿದ್ದೇವೆ. ನನ್ನ ಮಿತ್ರರಾದಂಥ ಸಚಿವರು ಒಂದೆರಡನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅಷ್ಟೇ ಅಲ್ಲದೆ ಈ ಕ್ಷೇತ್ರವನ್ನು ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಮಳೆ ಆಧಾರಿತ ಪ್ರದೇಶದಲ್ಲಿರತಕ್ಕ ಜನ ಬದುಕಬೇಕಾಗಿದ್ದರೆ, ಈ ಮಳೆ ಆಧಾರಿತಾ ತೋಟಗಾರಿಕಾ ಬೆಳೆಗಳನ್ನು ಮತ್ತು ಮರಗಿಡಗಳನ್ನು ನಾವು

ಬೆಳೆಸಬೇಕಾಗುತ್ತದೆ. ಅದಕ್ಕೆ ಹೆಚ್ಚಿನ ಶ್ರದ್ಧೆಯನ್ನು ಕೊಡಬೇಕು ಎಂಬುದು ಸರ್ಕಾರದ ಉದ್ದೇಶ. ಅದೇ ರೀತಿಯಾದಂಥ ತೀರ್ಮಾನವನ್ನು ನಾವು ಉಪಸಮಿತಿಯಲ್ಲೂ ಸಹ ತೆಗೆದುಕೊಂಡಿದ್ದೇವೆಂಬ ಮಾತನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್: ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತೋಟಗಾರಿಕೆ ಮಹತ್ವದ ಬಗ್ಗೆ ರೈತರಿಗೆ ಎಷ್ಟು ಅವಶ್ಯಕ ಇದೆ ಎಂಬ ಬಗ್ಗೆ ತಾವು ಸಭೆಯ ಗಮನಕ್ಕೆ ತಂದಿದ್ದೀರಿ. ನಾನೂ ಕೂಡ ಈ ಒಂದು ವಿಚಾರದಲ್ಲಿ ಹೇಳುತ್ತೇನೆ. ನನ್ನ ಮತ ಕ್ಷೇತ್ರದಲ್ಲಿ ಎರಡು ಫಾರಂಗಳಿವೆ. ಈಗಾಗಲೇ ಮಂತ್ರಿಗಳು ಉತ್ತರ ಕೊಟ್ಟ ಪ್ರಕಾರ ಎತ್ತಿನಹಳ್ಳಿ ಕ್ಷೇತ್ರ ಮತ್ತು ಸವಣೂರಿನಲ್ಲಿರತಕ್ಕ ಒಂದು ಕ್ಷೇತ್ರ. ಸುಮಾರು 26 ಎಕರೆ ಮತ್ತು 13 ಎಕರೆ ಇದೆ. ಈ ಕ್ಷೇತ್ರಗಳಲ್ಲಿ ಅವರ ಈ ಖರ್ಚು ಮತ್ತು ವೆಚ್ಚವನ್ನು ನೋಡಿದಾಗ ಬಹಳಷ್ಟು ಕಡಿಮೆ ಉತ್ಪನ್ನವನ್ನು ತೆಗೆಯತಕ್ಕ ಕೆಲಸವನ್ನು ಅಲ್ಲಿ ಮಾಡಿದ್ದಾರೆ. ಆದರೆ ಅಲ್ಲಿ ಬೋರ್‌ವೆಲ್‌ಗಳಿವೆ. ಮತ್ತು ಮಲೆನಾಡು ಪ್ರದೇಶದಲ್ಲಿ ಬರತಕ್ಕಂಥ ಈ ಎತ್ತಿನಹಳ್ಳಿ 26 ಎಕರೆ ಕ್ಷೇತ್ರದಲ್ಲಿ ಅಧಿಕಾರಿಗಳೇ ಆ ಫಾರಮ್‌ಗೆ ಬರುತ್ತಿಲ್ಲ. ನಾನೂ ಕೂಡ ಆ ಫಾರಂಗೆ ಎರಡು ಮೂರು ಸಾರಿ ಭೇಟಿ ಕೊಟ್ಟಿದ್ದೆ. ಅಲ್ಲಿ ಕೇಳಿದರೆ ಲೇಬರ್ಸನ್ನೂ ಕೂಡ ತೆಗೆದುಕೊಂಡಿಲ್ಲ.

ಅಧ್ಯಕ್ಷರು: ಅವರು ಉತ್ತರದಲ್ಲೇ ಹೇಳಿದರಲ್ಲ ದುಡ್ಡಿನ ತೊಂದರೆ ಇದೆ ಎಂದು.

ಶ್ರೀ ಮಂಜುನಾಥ ಸಿ. ಕುನ್ನೂರ್:– ಆ ಸಿಬ್ಬಂದಿಯ ನಿವಾರಣೆಯನ್ನೂ ಕೂಡ ಮಾಡಬೇಕು. ಆದರೆ ಇಲ್ಲಿ ತೋಟಗಾರಿಕಾ ಬೆಳೆಗಳ ಬಗ್ಗೆ ಅತೀ ಮಹತ್ವವಿರುವುದರಿಂದ ಇವತ್ತು ಧಾರವಾಡ ಜಿಲ್ಲೆಯಲ್ಲಿ ಜೋಗಿ ಎಲ್ಲಾಪುರ ಎಂಬ ಹಳ್ಳಿಯಲ್ಲಿ ಮಾವಿನ ಗಿಡಗಳನ್ನು ಬೆಳೆಯತಕ್ಕದ್ದನ್ನು ನೋಡಿದರೆ, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ, ಇವರು ಸಸಿಗಳನ್ನು ಈ ತೋಟಗಾರಿಕೆ ಇಲಾಖೆಗಿಂತಲೂ ಅಲ್ಲಿ ಹೋಗಿ ತೆಗೆದುಕೊಂಡು ಬನ್ನಿ ಎಂದು ಹೇಳತಕ್ಕ ವಿಶ್ವಾಸವನ್ನು ಜನತೆ ಹೊಂದಿದ್ದಾರೆ, ಆ ರೀತಿಯಲ್ಲಿ ವಿಶ್ವಾಸ ಬರುವಂತೆ ಇವತ್ತು ಸರ್ಕಾರಿ ಫಾರಂಗಳನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕು ಎಂದು ತಮ್ಮ ಮುಖೇನ ಇವತ್ತು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ: ಅಧ್ಯಕ್ಷರೆ, ಇದರಲ್ಲಿ ಒದಗಿಸಿರುವ ವಿವರದ ಪ್ರಕಾರ ನನ್ನ ಕ್ಷೇತ್ರದ ಸೀಬಿನಕೆರೆ ಫಾರಮ್‌ನಲ್ಲಿ 43 ಎಕರೆ ಇದೆ. ಸನ್ಮಾನ್ಯ ಅಧ್ಯಕ್ಷರೆ 43 ಎಕರೆ ಅಡಿಕೆ ತೋಟ ಇದು. ಸರ್ಕಾರದ ಆಸ್ತಿ ಇದು. 43 ಎಕರೆ ಅಡಿಕೆತೋಟಕ್ಕೆ 1 ಲಕ್ಷದ 29 ಸಾವಿರ ರೂಪಾಯಿ ಇವರು ಖರ್ಚು ಮಾಡಿದ್ದಾರೆ. ಇವರು ರೈತರಿಗೆ ಯಾವ ರೀತಿ ಬೇಸಾಯ ಮಾಡಬೇಕು ಎಂಬ ಬಗ್ಗೆ ಮಾರ್ಗದರ್ಶನ ಮಾಡಬೇಕು ಪ್ರಾತ್ಯಕ್ಷಿಕೆಯನ್ನು ಇವರು ಮಾಡಿ ತೋರಿಸಬೇಕು. 43 ಎಕರೆಗೆ 1 ಲಕ್ಷದ 29 ಸಾವಿರ ರೂಪಾಯಿಗಳನ್ನು ಇವರು ಖರ್ಚು ಮಾಡಿದರೆ, ಆ ತೋಟ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಿ. ಕೆಟ್ಟು ಹಾಳಾಗಿಹೋಗುತ್ತಿದೆ. ರೀಸರ್ಚ್ ಫಾರಂ ಅದು. ಈಗ ಆ ರೀಸರ್ಚ್ ಫಾರಮ್ಮನ್ನು ಬದಲಾಯಿಸಿ ಇವರ ಇಲಾಖೆಗೆ ವಹಿಸಿದ್ದಾರೆ. ಇವರು ಸಮಯಕ್ಕೆ ಸರಿಯಾಗಿ ಹಣ ಕೊಡದೇ ಸಾಕಷ್ಟು ಹಾಳಾಗಿ ಹೋಗಿದೆ. 8 ಲಕ್ಷ 9 ಲಕ್ಷ ರೂಪಾಯಿ ವಾರ್ಷಿಕ ಆದಾಯವನ್ನು ಸರ್ಕಾರಕ್ಕೆ ಕೊಡುತ್ತಾ ಇದೆ ಈ ಫಾರಂ. ಸಮಯಕ್ಕೆ ಸರಿಯಾಗಿ ಹಣ ಕೊಡಿ. ಮತ್ತು ಅದನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವುದಕ್ಕೆ ದಯಮಾಡಿ ವ್ಯವಸ್ಥೆ ಮಾಡಿ. ಮತ್ತೊಂದು, ನಮ್ಮ ತೀರ್ಥಹಳ್ಳಿಯಲ್ಲಿ ಜಿಲ್ಲಾ

ಪರಿಷತ್ ಫಾರಂ ಏನಿದೆ, ಅದಕ್ಕೆ ಆದಾಯ ಜಾಸ್ತಿ ಬರುತ್ತಾ ಇದೆ. ಅದನ್ನು ಸರ್ಕಾರಕ್ಕೆ ಕಟ್ಟುತ್ತೀರಿ. ಜಿಲ್ಲಾ ಪರಿಷತ್ತಿನಿಂದ ನಿರ್ವಹಣೆಗೆ ಕೊಡುತ್ತಿರುವ ವೆಚ್ಚ ಕಡಿಮೆಯಾಗುತ್ತಾ ಇದೆ. ಹೀಗಾಗಿ ತುಂಗಾ ನದಿ ದಡದಲ್ಲಿ ಸಾಕಷ್ಟು ನೀರಿರುವಂಥ ಪ್ರದೇಶದಲ್ಲಿ ಎರಡು ಮೂರು ಫಾರಂಗಳು ಕೆಟ್ಟು ಹಾಳಾಗಿ ಹೋಗುತ್ತಿದೆ. ಸರ್ಕಾರದ ಆಸ್ತಿ ನಷ್ಟ ಆಗುತ್ತಾ ಇದೆ. ತಮ್ಮಂಥ ಮಂತ್ರಿಗಳಿದ್ದಾಗ ಈ ರೀತಿ ಆಗಬಾರದು ದಯಮಾಡಿ. ತೀರ್ಥಹಳ್ಳಿಯಲ್ಲಿರುವಂಥ ಫಾರಂಗಳನ್ನು ಸರಿಯಾದ ರೀತಿ ನಿರ್ವಹಿಸುವ ಹಾಗೆ ಅಧಿಕಾರಿಗಳನ್ನು ಎಚ್ಚರಿಸಿ.

ಅಧ್ಯಕ್ಷರು: ಎಲ್ಲ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಿ.

ಶ್ರೀ ಡಿ.ಟಿ.ಜಯಕುಮಾರ್: ಅವರ ಸಲಹೆಗಳನ್ನು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಶಿವಪ್ಪನವರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ.

ಬೆಳಗಾಂ ತಾಲ್ಲೂಕು ಎ ಪಿ ಎಂ ಸಿ ಮತಿಯಿಂದ ರಸ್ತೆ ನಿರ್ವಹಣೆಯ ಬಗ್ಗೆ.

117 (824) ಶ್ರೀ ಬಿ.ಐ. ಪಾಟೀಲ್. (ಉಚಗಾಂವ್): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನಲ್ಲಿ ಎ ಪಿ ಎಂ ಸಿ ಮತಿಯಿಂದ ರಸ್ತೆ ನಿರ್ವಹಣೆಯು ಬಹಳ ಕೆಟ್ಟದಾಗಿ ನಿರ್ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಸರ್ಕಾರದಿಂದ ದುರಸ್ತಿ ಬಗ್ಗೆ ಕ್ರಮ ತೆಗೆದುಕೊಂಡಿರುವುದೇನು;

ಶ್ರೀ ಹೆಚ್ ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ- ಆದರೆ ಸರ್ಕಾರದ ಈಗಿನ ನೀತಿಯನುಸಾರ ಸಂಬಂಧಿಸಿದ ಜಿಲ್ಲಾ ಪಂಚಾಯಿತಿಗಳು ಈ ರಸ್ತೆಗಳನ್ನು ನಿರ್ವಹಿಸಬೇಕಾಗಿದೆ.

SRI B.I.PATIL: The answers to my question are not satisfactory. Roads maintained by the APMC are utterly in bad shape. They are not spending single paise. They have also not been taken over by the zilla panchayat, Belgaum. who will repair them?

ಶ್ರೀ ಹೆಚ್. ನಾಗಪ್ಪ: ಸಾರ್ , ರಸ್ತೆಗಳನ್ನು ಮೈಂಟೇನ್ ಮಾಡತಕ್ಕದ್ದು ನಮ್ಮ ಕೆಲಸ ಅಲ್ಲ. ಅದನ್ನು ಜಿಲ್ಲಾ ಪರಿಷತ್ತಿನವರೇ ಮೈಂಟೇನ್ ಮಾಡಬೇಕೇ ಹೊರತು ನಾವು ಮಾಡುವುದಿಲ್ಲ.